B.L.D.E. Association's

# S. B. Arts & K.C.P. Science College,
# VIJAYAPUR- 586 103.

# ASSIGNMENT

For B.A./ B.Sc. ..B.A.... Semester
2022 - 2023

Name of the Student Tejashwini S Hosatti

Roll No. 124 R.C.U. Seat No. U15KM23A0124

Subject History (DSE-2)

| Assignment No. | Date | Marks Assigned | Marks Obtained | Name and Signature of Teacher | Remarks |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| | | | | | |
| | | | | | |
| | | | | | |

Scanned with CamScanner

# ASSIGNMENT

Scanned with CamScanner

# ನಮ್ಮ ಭಾರತದ ಸಾಂಸ್ಕೃತಿಕ ಪರಂಪರೆಯ ಉತ್ಸವಗಳು

# :- ಪರಿವಿಡಿ :-

1. ಭಾರತದ ಸಂಗೀತ ಪರಂಪರೆ ಅರ್ಥ ಬರೆಯಿರಿ.
2. ಭಾರತದ ಸಂಗೀತ ಪರಂಪರೆ ಲಕ್ಷಣವನ್ನು ಬರೆಯಿರಿ.
3. ಭಾರತದ ಸಂಸ್ಕೃತ ಪರಂಪರೆಯ ಪ್ರಕಾರವನ್ನು ವಿವರಿಸಿ.

Scanned with CamScanner

# 8 - Seminar And Assignment

01. ಭಾರತದ ಸಾಂಸ್ಕೃತಿಕ ಪರಂಪರೆಯ ಲಕ್ಷಣಗಳು ಹಾಗೂ ಪ್ರಕಾರಗಳ ಕುರಿತು ವಿವರಿಸಿ.

**ಪೀಠಿಕೆ :**

ಪ್ರಾಚೀನ ಗತಕಾಲದ ಘಟನೆಗಳು ಮತ್ತು ಸಂಗತಿಗಳು, ಸಂಶೋಧನೆಯ ಅಧ್ಯಯನವನ್ನು ಭಾರತದ ಸಾಂಸ್ಕೃತಿಕ ಪರಂಪರೆ ಎಂದು ಕರೆಯುವರು. ಈ ಕೆಳಗಿನಂತೆ ಗುಣಲಕ್ಷಣವನ್ನು ನೋಡಬಹುದು.

## ಸಾಂಸ್ಕೃತಿಕ ಪರಂಪರೆಯ ಗುಣಲಕ್ಷಣಗಳು :-

01. ಸಮನ್ವಯತೆ
02. ವಿವಿಧತೆಯಲ್ಲಿ ಏಕತೆ
03. ಭಕ್ತಿ ಪ್ರಾಧಾನ್ಯತೆ ಮತ್ತು ಮಹಿಳೆ
04. ಸಮನ್ವಯತೆ ಸಂಪ್ರದಾಯ
05. ಧಾರ್ಮಿಕ ಸಹನೆ
06. ಉಚ್ಚವರ್ಗ & ಜನಸಾಮಾನ್ಯರ ಸಂಪ್ರದಾಯ

* **ಡಾಸನ್ :**

ಇವರ ಪ್ರಕಾರ, ಸಂಸ್ಕೃತಿ ಪರಂಪರೆ ಹಿಂದಿನ ಮುಂದಿನ ಪೀಳಿಗೆಗಳಿಗೆ ಸಾಗಿಸುವುದನ್ನು ಸಾಂಸ್ಕೃತಿಕ ಪರಂಪರೆ ಎನ್ನುವರು.

* **ಟೇಲರ್ :**

ನಂಬಿಕೆ, ಮೌಲ್ಯಗಳು, ಕಲ್ಪನೆಗಳು, ಕಲೆ ಕೌಶಲ್ಯವನ್ನು ಒಳಗೊಂಡಿರುವುದನ್ನು ಸಾಂಸ್ಕೃತಿಕ ಪರಂಪರೆ ಎಂದು ಕರೆದಿದ್ದಾರೆ.

Scanned with CamScanner

## 01. ಸಾಮರಸ್ಯತೆ

ಇದು ಭಾರತೀಯ ಸಂಸ್ಕೃತಿಯ ಅತ್ಯಂತ ಪ್ರಮುಖವಾದ ಲಕ್ಷಣವಾಗಿದೆ. ಇದು ಐತಿಹಾಸಿಕ ಬಳುವಳಿ ಮಾತ್ರವಲ್ಲ ನಮ್ಮ ಆಹಾರ, ಉಡುಗೆ-ತೊಡುಗೆ, ಪದ್ಧತಿ ದೇವರು, ಧರ್ಮ, ವಿಚಾರ, ಅನೇಕ ವಿಚಾರಗಳಲ್ಲಿ ಸಾಮರಸ್ಯತೆಯನ್ನು ಕಾಣಬಹುದು. ಚಹಾ - ರಾಷ್ಟ್ರ ಪಾನೀಯವೆಂದು ಉತ್ತರ-ದಕ್ಷಿಣ ಭಾರತೀಯರೆಲ್ಲರೂ ಕೂಡಾ ಪ್ರಿಯವಾದುದು. ಆಲೂ, ಮೆಣಸಿನಕಾಯಿ, ಪೈನಾಪಲ್ ಟೊಮ್ಯಾಟೊ ಇತರೇ ಕೃಷಿ ಉತ್ಪನ್ನಗಳು ವಿದೇಶಗಳಿಂದ ಬಂದರೂ ಕೂಡ ಈಗ ಭಾರತೀಯರ ಆಹಾರದ ಅವಿಭಾಜ್ಯ ಪದಾರ್ಥಗಳಾಗಿವೆ. ಬ್ರೆಡ್, ಚೈನೀಸ್, ತಂದೂರಿ ಆಹಾರ ಪದಾರ್ಥಗಳು ಭಾರತದಲ್ಲಿ ಜನಪ್ರಿಯವಾಗಿವೆ.

ಸಾಧಾರಣವಾಗಿ ಭಾರತೀಯರು ಬದಲಾಗಿದ್ದಾರೆ. ಶರ್ಟ್, ಪ್ಯಾಂಟ್, ಕೋಟ್ ಮುಂತಾದವು ಭಾರತೀಯರ ಉಡುಪಾಗಿವೆ. ಭಾರತೀಯ ಹಿಂದೂಗಳು ಮುಸ್ಲಿಂಮರು ಅನೇಕ ಸಂಪ್ರದಾಯ-ಆಚರಣೆಗಳನ್ನು ಸಹಬಾಳ್ವೆಯಿಂದಲೇ ನಡೆಸಿದ್ದು ಬದುಕಲು ಸಮುದಾಯ ಮುಖ್ಯವಾಹಿನಿಗೆ ಬರುವಂತಾಗಿದೆ.

## 02. ವಿವಿಧತೆಯಲ್ಲಿ ಏಕತೆ

ಈ ಮೇಲಿನ ಎಲ್ಲಾ ಅಂಶಗಳು ಭಾರತದ ರಾಷ್ಟ್ರೀಯ ಐಕ್ಯತೆಯನ್ನು ಮೂಡಿಸಲು ಬೆಂಬಲವಾಗಿವೆ. ಅದನ್ನು ಕೂಡಾ ಈ ಕೆಳಗಿನ ಎಲ್ಲಾ ಅಂಶಗಳು ಭಾರತದ ವೈವಿಧ್ಯತೆಯಲ್ಲಿ ಏಕತೆಯನ್ನು ಮೂಡಿಸುವುದು ಅಂಶವಾಗಿದೆ. ಭಾರತದಲ್ಲಿ ಸುಮಾರು 4635 ಸಮುದಾಯಗಳಲ್ಲಿ ವಿಭಿನ್ನ ಆಚರಣೆಗಳನ್ನು ಜೀವನದಲ್ಲಿ ಹೊಂದಿವೆ. 55% ರಷ್ಟು ಸಮುದಾಯ ವೃತ್ತಿಯನ್ನಾಧರಿಸಿದ ಹೆಸರುಗಳನ್ನು ಹೊಂದಿವೆ. ಇನ್ನೊಂದು ಅಧ್ಯಯನದಂತೆ 3059 ಸಮುದಾಯದಲ್ಲಿ ಸುಮಾರು 2000 ಸಮುದಾಯಗಳು ಶವ ಹೂಳುವ ಪದ್ಧತಿಯನ್ನು ಅನುಸರಿಸುತ್ತವೆ. ಭಾಷೆ ಕೂಡಾ ಸಂಸ್ಕೃತಿ ಮತ್ತು ವೈವಿಧ್ಯತೆಯನ್ನು ಸಾರುತ್ತದೆ. ಸುಮಾರು 325 ಭಾಷೆಗಳನ್ನು ಹೊಂದಿದೆ.

Scanned with CamScanner

a. ಭೂಪ್ರದೇಶದ ಪರಿಸರ

ಭೂಪ್ರದೇಶದ ಪರಿಸರ ಜನರಲ್ಲಿ ನಾವು ಹಿಂದೂ ಮತ್ತು ನಮ್ಮ ರಾಷ್ಟ್ರ ಹಿಂದೂ ಎಂಬ ಮನೋಭಾವವನ್ನು ಮೂಡಿಸುವಲ್ಲಿ ನೆರವಾಗಿದೆ. ಎಲ್ಲಾ ರಾಜಕೀಯ ಅಸ್ತಿತ್ವದ ಮಧ್ಯೆಯೂ ನಾವು ಹಿಂದೂ ಭೂಪ್ರದೇಶಕ್ಕೆ ಸೇರಿದವರೆಂಬ ಭಾವನೆಯೂ ಮೂಡಿಸುವಲ್ಲಿ ಭೌಗೋಳಿಕ ಅಂಶಗಳು ಸಹಕಾರಿಯಾಗಿವೆ. ಹಿಂದೂಗಳು ಭಾರತವನ್ನು ಭರತ ಮಾತೆ ಎನ್ನುವರು.

b. ಸಾಮಾನ್ಯ ಸಂಸ್ಕೃತಿ

ಭಾರತೀಯರು ಹಲವಾರು ಶತಮಾನಗಳ ಕಾಲ ಸಾಮಾನ್ಯ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದರು. ಪ್ರದೇಶದಿಂದ ಪ್ರದೇಶಕ್ಕೆ, ಆಚಾರ - ವಿಚಾರಗಳು & ಸಂಪ್ರದಾಯಗಳು ಬದಲಾದರು ಕೂಡಾ ಅವುಗಳಲ್ಲಿ ಹೋಲಿಕೆಗಳನ್ನು ಮೂಲಭೂತ ಬದಲಾವಣೆಗಳಿರಲಿಲ್ಲ. ಭಾರತದ ಎಲ್ಲಾ ಪ್ರದೇಶಗಳ ಜನರ ಜೀವನ ವಿಧಾನವು ಒಂದಾಗಿದೆ. ಹೀಗಾಗಿ ಇದರ ಭಾರತೀಯರ ಸಂಸ್ಕೃತಿಯ ವೈವಿಧ್ಯತೆಯಲ್ಲಿ ಏಕತೆಯನ್ನು ಸೃಷ್ಟಿಸಿತು.

c. ಧಾರ್ಮಿಕ ವೈವಿಧ್ಯತೆ

ಹಿಂದೂ ಧರ್ಮವು ಭಾರತೀಯರ ಧರ್ಮವಾಗಿದ್ದು ಏಕತೆಯನ್ನು ತರುವ ಬಹು ಶಕ್ತಿಯುತ ಅಂಶವಾಗಿದೆ. ವೇದ ಸಾಹಿತ್ಯ ಮಹಾಗ್ರಂಥಗಳಾದ ರಾಮಾಯಣ ಮತ್ತು ಮಹಾಭಾರತ, ಪುರಾಣಗಳು ಮತ್ತು ಧರ್ಮಶಾಸ್ತ್ರಗಳು ಭಾರತೀಯರಲ್ಲಿ ಏಕತೆಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಹಿಂದೂ ಉತ್ಸವಗಳು, ಹಬ್ಬಗಳು, ವೈವಿಧ್ಯತೆಯಲ್ಲಿ ಏಕತೆಯನ್ನು ಮೂಡಿಸುವ ಅಂಶಗಳು. ಬನಾರಸ್, ಹರಿದ್ವಾರ, ಬದರಿನಾಥ ಮೊದಲಾದ ಧಾರ್ಮಿಕ ಕ್ಷೇತ್ರಗಳಾಗಿವೆ. ಭಾರತೀಯರು ಈ ಪ್ರದೇಶಗಳಿಗೆ ಹಿಮ್ಮಯಾದರು ಭೇಟಿ ನೀಡುತ್ತಾರೆ.

Scanned with CamScanner

## 03. ಪಿತೃ ಪ್ರಾಧಾನ್ಯತೆ ಮತ್ತು ಮಹಿಳೆ

ನಮ್ಮ ಸಂಸ್ಕೃತಿ ಪರಂಪರೆಯು ಮಹಿಳೆಯರಿಗೆ ಸರಿ ಸಮಾನವಾದ ಸ್ಥಾನಮಾನ ನೀಡಿರುವುದಿಲ್ಲ. ನಮ್ಮದು ಪುರುಷ ಪ್ರಾಧಾನ್ಯತೆ ಹೊಂದಿದ ಸಮಾಜ. ಪ್ರಾಚೀನ ಕಾಲದ ಸಮಾಜದಲ್ಲಿ ಮಹಿಳಾ ಪ್ರಾತಿನಿಧ್ಯವಿರದೇ ಆಕೆಯನ್ನು ಭೋಗದ ವಸ್ತು ಎಂದು ಪರಿಗಣಿಸಲಾಗಿದೆ. ಸತಿ ಪದ್ಧತಿ, ವಿಧವಾ ವಿವಾಹ ನಿಷೇಧ, ಹೆಣ್ಣು ಶಿಸು ಹತ್ಯೆ, ಬಾಲ್ಯ ವಿವಾಹ ಮೊದಲಾದಂತಹ ಆಚರಣೆಗಳು ಅಂದು ಸಾಮಾನ್ಯವಾಗಿದ್ದವು.

ಮಹಿಳೆಯರಿಗೆ ಧಾರ್ಮಿಕ - ಶೈಕ್ಷಣಿಕ ಚಟುವಟಿಕೆ ಭಾಗಿಯಲ್ಲಿ ಹಕ್ಕುಗಳು ಇರಲಿಲ್ಲ. ಇದನ್ನು ಪ್ರಾಚೀನ ಗ್ರಂಥಗಳು ಮಾನ್ಯಮಾಡಿದ್ದವು. 6ನೇಯ ಶತಮಾನದಲ್ಲಿ ಸತಿ ಪದ್ಧತಿಯ ಕುರುಹುಗಳನ್ನು ಕಾಣಬಹುದು.

## 04. ಸಮನ್ವಯತೆ ಸಂಪ್ರದಾಯ

ಸಂಯುಕ್ತ ಸಂಸ್ಕೃತಿಯು ಭಾರತೀಯರ ಸಂಪ್ರದಾಯದ ಕೊಡುಗೆಯಾಗಿದೆ. ಆರ್ಯರು ಹೊರಗಿನಿಂದ ಬಂದ ಮೇಲೆ ಸ್ಥಳೀಯ ಸಂಸ್ಕೃತಿಯೊಂದಿಗೆ ಬೆರೆತು ಸಂಮಿಶ್ರವಾದ ಸಂಸ್ಕೃತಿಯ ಬೆಳವಣಿಗೆಗೆ ಸಹಕಾರಿಯಾಯಿತು. ಇಂತಹ ಸಮ್ಮಿಶ್ರ ಸಂಸ್ಕೃತಿಯ ಲಕ್ಷಣಗಳನ್ನು ಇಂಡೋ - ಇಸ್ಲಾಮಿಕ್ ಶೈಲಿಯಲ್ಲಿ ಕಾಣಬಹುದಾಗಿದೆ. ಉರ್ದು ಭಾಷೆಯು ಬೆಳವಣಿಗೆಯಾಯಿತು. ಸಂಗೀತಕ್ಕೆ ಸಂಬಂಧಿಸಿದಂತೆ ಖವ್ವಾಲಿ, ತಬಲಾ, ಸಿತಾರ್ ಖಯಾಲಗಳಲ್ಲಿ ಇಂತಹ ಮಿಶ್ರಣವನ್ನು ಕಾಣಬಹುದು. ಆಯಾ ಧರ್ಮದ ಹಲವು ಪಂಗಡಗಳು ಈ ಸಂತರ ಅನುಯಾಯಿಗಳಾದರು. ಕಬೀರ, ದಾದುರಂತಹ ಹಲವಾರು ಹಿಂದೂ - ಮುಸ್ಲಿಮರಿಗೂ ಆದರಣೀಯ ಸಂತರೆನಿಸಿದರು. ಸೂಫಿ ಸಂತರ ನೆನಪಿನಾರ್ಥ ನಡೆಯುವ ಉರುಸ್‌ಗಳು ಇಂದಿಗೂ ಎಲ್ಲೆಡೆ ನಡೆಯುತ್ತವೆ.

05. **ಧಾರ್ಮಿಕ ಸಹನೆ**

ಧಾರ್ಮಿಕ ಸಹನೆ ಪ್ರಾಚೀನಕಾಲದಿಂದಲೂ ಭಾರತೀಯ ಸಂಸ್ಕೃತಿಯ ಅವಿಭಾಜ್ಯವಾದ ಅಂಗವಾಗಿದೆ ಎಂದು ಹೇಳಬಹುದು. ಇದರ ಉತ್ಕೃಷ್ಟ ಸ್ಥಾಯೀಭಾವವೆಂದರೆ ಕೆಲ ಸಂಘರ್ಷದಲ್ಲಿ ಧಾರ್ಮಿಕ ಸಮಸ್ಯೆ ಉಂಟಾದರೆ ಅದನ್ನು ಶಾಂತಿ ಚರ್ಚೆಯ ಮೂಲಕ ಬಗೆಹರಿಸಿರುವುದನ್ನು ನೋಡಬಹುದು. ಆರ್ಯರು ಹರಪ್ಪ ಸಂಸ್ಕೃತಿಯನ್ನು ನಾಶಮಾಡಿದರೆಂಬ ಅರಿವನ್ನು ಈಗ ಒಪ್ಪದೆ ಅವರು ತಮ್ಮ ತಮ್ಮ ಪ್ರದೇಶಗಳಲ್ಲಿ ನೆಲೆನಿಂತು ತಮ್ಮತನವನ್ನು ಉಳಿಸಿಕೊಂಡರೆಂದು ತಿಳಿಯಲಾಗುತ್ತದೆ.

ಆರ್ಯರು ಹರಪ್ಪ ಸಂಸ್ಕೃತಿಯನ್ನು ನಾಶಮಾಡಿದರೆಂದು ಹೇಳಲಾಗುವುದು. ಹರಪ್ಪ ಜನರ ದೇವಾರಾಧನೆಯ ಹಲವು ಅಂಶಗಳನ್ನು ರೂಢಿಸಿಕೊಂಡರು. ಜೈನ-ಬೌದ್ಧ ಧರ್ಮಗಳು ಅಹಿಂಸಾ ತತ್ವದಡಿ ಜನಪ್ರಿಯ ರಾಜಾಶ್ರಯಕ್ಕೆ ಪಾತ್ರವಾದವು.

06. **ಉಪಮೆಗೆ ಮತ್ತು ಜನಸಾಮಾನ್ಯರ ಸಂಪ್ರದಾಯಗಳು**

ಭಾರತೀಯ ಸಂಸ್ಕೃತಿಯು ಉನ್ನತ ಮತ್ತು ಜನಸಾಮಾನ್ಯರ ಮೂಲಕವೂ ಶ್ರೀಮಂತಗೊಳ್ಳುತ್ತಿದೆ. ರಾಜಾಶ್ರಯವನ್ನು ಪಡೆದ ಕಾಳಿದಾಸನ ಕಾವ್ಯ, ಪಾಣಿನಿಯ ವ್ಯಾಕರಣ ಕಲಿದಾಸನ ಪದ್ಯಗಳು, ಕೌಟಿಲ್ಯನ ವೇದಾಂತ ಸೂತ್ರಗಳು ನಮ್ಮ ಪರಂಪರೆ ಸಂಸ್ಕೃತಿಯ ಪ್ರಮುಖ ಲಕ್ಷಣವಾಗಿವೆ. ಸಂಸ್ಕೃತಿಯ ವ್ಯಕ್ತಿತ್ವದಲ್ಲಿ ಇವುಗಳ ಅರ್ಥ ನಮಗೆ ಬೇಕಿದ್ದು.

ಜಾನಪದೀಯ ಸಂಸ್ಕೃತಿಯು ನಮ್ಮ ಸಂಸ್ಕೃತಿಗೆ ಪರಂಪರೆ ಮತ್ತು ದೇಶದ ಎಲ್ಲೆಡೆ ಹಿಂದಿನ ಆಧಾರವಾಗಿದೆ. ವನವಾಸಿ ತಂತ್ರಗಳು ಅಂದರೆಯೇ ಕಥೆಗಳು, ಸೋಬಾನೆ, ಮಾಲಿನಿ ಅಲ್ಲದೆ ಮುಂತಾದ ಕಲೆಗಳು. ಸಾಂಸ್ಕೃತಿಕ ಪರಂಪರೆಯ ವೈವಿಧ್ಯತೆಯ ಸೊಬಗಿನ ಶ್ರೀಮಂತಿಕೆಯನ್ನು ತೋರಿಸಿದೆ ಎಂದು ನಾವು ಹೇಳಬಹುದು.

ಪ್ರಾಚೀನ ಕಾಲದಿಂದಲೂ ಮಾನವನು ಸಾಧಿಸಿದ ಸಾಧನೆಯೆಗಳು ಎಲ್ಲಾ ಅಂಶವನ್ನು ಒಳಗೊಂಡಿದೆ. ಹಿಂದಿನ ತಲೆಮಾರುಗಳಿಂದ ಅನುವಂಶೀಯವಾಗಿಯೂ ಬಂದ ಈ ಎಲ್ಲಾ ಮೌಲ್ಯದ ಅಂಶಗಳೂ ಸಾಂಸ್ಕೃತಿಕ ಪರಂಪರೆಯೆನಿಸಿವೆ. ಮಾನವೀಯ ಹಾಗೂ ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ಎಲ್ಲಾ ಅಂಶಗಳೂ ಸಾಂಸ್ಕೃತಿಕ ಪರಂಪರೆಯ ಪ್ರತೀಕಗಳಾಗಿವೆ. ನಮ್ಮ ಪ್ರಾಚೀನ ಪರಂಪರೆಯನ್ನು ಬಿಂಬಿಸುವ ಕಲಾತ್ಮಕ ದೇವಾಲಯಗಳು, ಶಿಲ್ಪಗಳು, ಮೂರ್ತಿಗಳು, ಗೋಪುರಗಳು ಅಪರೂಪದ ಚಿತ್ರ ಪ್ರಾಕಾರಗಳು ಕಾಣುತ್ತವೆ.

ಸಂಸ್ಕೃತಿಯು ಸಮಾಜದ ಬಹುಮುಖ್ಯ ಕೇಂದ್ರವೆನಿಸಿದೆ. ಸಂಸ್ಕೃತಿ ರಹಿತ ಸಮಾಜ ಪರಂಪರೆ ಸಾಧ್ಯವಿಲ್ಲ. ಮಾನವನು ಸಂಸ್ಕೃತಿ ಪರಂಪರೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾನೆ.

## ಸಾಂಸ್ಕೃತಿಕ ಪರಂಪರೆಯ ಪ್ರಮುಖ ಪ್ರಕಾರಗಳು :-

01. ಭೌಗೋಳಿಕ ಪರಂಪರೆ
02. ಸಾಂಸ್ಕೃತಿಕ ಪರಂಪರೆ
03. ಐತಿಹಾಸಿಕ ಪರಂಪರೆ
04. ದೇಶಿ, ಗ್ರಾಮೀಣ, ಜಾನಪದ ಬುಡಕಟ್ಟು ಪರಂಪರೆ
05. ಭಾಷೆ, ಸಾಹಿತ್ಯ, ಸಂಸ್ಕೃತಿ ಪರಂಪರೆ
06. ಜಾನಪದ ಕ್ರೀಡಾ ಪರಂಪರೆ
07. ಜೀವನಶೈಲಿ, ಆಹಾರ ಪರಂಪರೆ
08. ಆರೋಗ್ಯ, ವೈದ್ಯ, ಯೋಗ, ಪರಂಪರೆ

Scanned with CamScanner

## 01. ಭೂಗೋಳಿಕ ಪರಂಪರೆ

ಆರೋಗ್ಯಕರವಾದ ಜೀವನ, ರೋಗರುಜಿನಗಳಿಗೆ ಪ್ರಾಕೃತಿಕ ಚಿಕಿತ್ಸೆ, ಗಿಡಮೂಲಿಕೆಗಳಿಂದ ಚಿಕಿತ್ಸೆ ಬುಡಕಟ್ಟು ಜನರ ವೈದ್ಯ ಪದ್ಧತಿಯು ಪ್ರಧಾನ-ವಾಗುವಂತೆಯಾಗಿದೆ. ಭೂಗೋಳಿಕ ಪರಂಪರೆಯನ್ನು ನೈಸರ್ಗಿಕ ಪರಂಪರೆ ಎಂದು ಕರೆಯುತ್ತೇವೆ. ಇಂದಿಗೂ ಪ್ರದೇಶದ ಭೂಗೋಳಿಕಾಂಶಗಳು ಮಾನವನ ಸಂಸ್ಕೃತಿಯ ಬೆಳವಣಿಗೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ.

## 02. ಐತಿಹಾಸಿಕ ಪರಂಪರೆ

ಐತಿಹಾಸಿಕ ಪರಂಪರೆಯ ಕೇಂದ್ರಗಳಾದ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ಹಂಪಿ, ಅಜಂತಾ, ಎಲ್ಲೋರಾ, ಸಾಂಚಿ ಮುಂತಾದವುಗಳು. ರಾಜಮನೆತನಗಳು ನಿರ್ಮಿಸಿರುವ ಕಲೆ ಮತ್ತು ವಾಸ್ತುಶಿಲ್ಪವನ್ನು ಪ್ರತಿನಿಧಿಸುವಂತೆ ನಿರ್ಮಿತ ಪರಂಪರೆಯು ಐತಿಹಾಸಿಕ ಪರಂಪರೆಯಾಗಿದೆ. ಈ ಐತಿಹಾಸಿಕ ಸ್ಥಳಗಳಲ್ಲಿ ಕಂಡು-ಬರುವ ದೇವಾಲಯಗಳು, ಕೋಟೆ, ಕೊತ್ತಲಗಳು ಸಮಾಧಿಗಳು ನಿರ್ಮಿತ ಪರಂಪರೆಯಾಗಿವೆ. ಈ ಸ್ಮಾರಕಗಳು ಭೌತಿಕ ಸ್ವರೂಪದಲ್ಲಿವೆ. ಮಾನವನ ನಿರ್ಮಿತ ವಸ್ತು, ಗೋಚರ, ಸ್ವರೂಪದಲ್ಲಿರುವುದರಿಂದ ಇವುಗಳನ್ನು ನಿರ್ಮಿತ ಪರಂಪರೆ ಎಂದು ಕರೆಯುವರು. ಈ ಐತಿಹಾಸಿಕ ಪರಂಪರೆ ಪ್ರತಿನಿಧಿಸುವ ಸ್ಮಾರಕಗಳ ರಕ್ಷಣೆಯನ್ನು ಮಾಡುತ್ತವೆ.

ಭಾರತದ ಕಲ್ಕತ್ತಾದಲ್ಲಿ ಇರುವ ವಸ್ತುಸಂಗ್ರಹಾಲಯವು, ಈ ಪರಂಪರೆಯ ರಕ್ಷಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಶಿಲಾಯುಗದ ಕಾಲದಿಂದ ಬ್ರಿಟಿಷರ ಕಾಲದವರೆಗೂ ದೊರೆತಿವೆ. ಮೊಘಲ ಸಾಮ್ರಾಜ್ಯದ ಉದ್ಯಾನವನಗಳು, ಕೋಟೆಗಳು ಪರಂಪರೆಗೆ ಉದಾಹರಣೆಯಾಗಿವೆ.

## 03. ಸಾಂಸ್ಕೃತಿಕ ಪರಂಪರೆ

ಪ್ರಾಚೀನ ಕಾಲದ ಭಾಷೆ, ಸಾಹಿತ್ಯ, ಶಿಲ್ಪಕಲೆ ಸಂಸ್ಕೃತಿ, ಜಾತ್ರೆ, ಉತ್ಸವ, ಸಂಗೀತ, ಕ್ರೀಡೆ, ನೃತ್ಯ ಜೀವನಶೈಲಿ, ಕೃಷಿ, ತಂತ್ರಜ್ಞಾನ, ಜಾತ್ಯತೀತವಿಚಾರ ಇತ್ಯಾದಿಗಳೆಲ್ಲವೂ ಸಾಂಸ್ಕೃತಿಕ ಪರಂಪರೆಯ ಅಂಶವಾಗಿವೆ ಎಂದು ಹೇಳಬಹುದು. ಇದು ದೈನಂದಿನ ಜೀವನದಲ್ಲಿ, ಧರ್ಮೋಪದೇಶಗಳಲ್ಲಿ, ಆಧ್ಯಾತ್ಮಿಕ ನಂಬಿಕೆಗಳಲ್ಲಿ ಅಂತರ್ಗತವಾಗಿದ್ದು ರೂಢಿ, ಸಂಪ್ರದಾಯ ನಂಬಿಕೆ, ನಡವಳಿಕೆಗಳ ರೂಪದಲ್ಲಿ ಪಾರಂಪರಿಕವಾಗಿ ಮುಂದುವರೆದು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಲ್ಪಡುತ್ತಿರುವ ಸಾಂಸ್ಕೃತಿಕ ಅಂಶಗಳಾಗಿವೆ.

## 04. ಮೌಖಿಕ ಪರಂಪರೆ

ಮೌಖಿಕ ಪರಂಪರೆಯು ಅಮೂರ್ತ, ಅದೃಶ್ಯ ಪರಂಪರೆಯಾಗಿದೆ. ಇದು ಗುರುಶಿಷ್ಯ ಪರಂಪರೆಯ ಲಕ್ಷಣವನ್ನು ಹೊಂದಿದ್ದು ಪಾರಂಪರಿಕವಾಗಿ ಸಾಗಿ ಬಂದಿರುವ ಜನಪದ ಹಾಡು, ಲಾವಣಿ, ಗೀಗೀಪದ ದಾಸರ ಪದ, ಭಜನೆ ಪದ, ಒಡಪುಗಳು, ಗಾದೆಗಳು ಒಗಟು, ಇಲ್ಲದ ತರ್ಕ, ಕೆಮ್ಮರಣಿ ಇತರೆ ಬುಡಕಟ್ಟು ಶಾಸ್ತ್ರಗಳು, ಸಂಪ್ರದಾಯಗಳು ಇತ್ಯಾದಿ ಮೌಖಿಕ ಪರಂಪರೆಯಾಗಿವೆ. ಶತಶತಮಾನಗಳ ಕಾಲ ಪದ ಸಾಹಿತ್ಯ ಮೌಖಿಕವಾಗಿಯೇ ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಲ್ಪಡುತ್ತದೆ.

ಮೌಖಿಕ ಪರಂಪರೆ ಅಷ್ಟೊಂದು ಸುಲಭವಾಗಿ ಮಾಯವಾಗುವುದಿಲ್ಲ ಇದು ಈ ಪರಂಪರೆಯ ಸಾಮಾನ್ಯವಾದ ಲಕ್ಷಣವಾಗಿದೆ. ಮೌಖಿಕ ಪರಂಪರೆ ಅಷ್ಟು ಸುಲಭವಾಗಿ ಮಾಯವಾಗುವ ಪರಂಪರೆಯಾಗಿಲ್ಲ ಎಂದು ಹೇಳಬಹುದು.

Scanned with CamScanner

05 ಇತರ ಪರಂಪರೆ

ಭಾರತ ಶ್ರೀಮಂತ ಪರಂಪರೆಯ ದೇಶವಾಗಿದೆ. ನೈತಿಕತೆ, ಸಾಂಸ್ಕೃತಿಕತೆ, ಸೃಜನಶೀಲತೆ, ವೈವಿಧ್ಯತೆ, ಜೀವನಶೈಲಿಯ ಪರಂಪರೆಗಳನ್ನಲ್ಲದೆ ಜೀವನ ಪದ್ಧತಿಯಲ್ಲಿ ಅನೇಕ ಇತರ ರೀತಿ ಸಂಪ್ರದಾಯ ಪರಂಪರೆಯನ್ನು ಹೊಂದಿದೆ. ಭಾರತ ದೇಶವು ಕೃಷಿ ಪರಂಪರೆ, ಸಾಗುವಳಿ, ಹವಾಮಾನ ಜ್ಞಾನ ಬೀಜ ತಂತ್ರಜ್ಞಾನ ಹವಾಮಾನ ಆಧಾರಿತ ಬೆಳೆ ನಾಟಿಯಾರ ಪದ್ಧತಿಗಳ ಕಾಲದ ಇತಿಹಾಸವಿದೆ. ಪಾರಂಪರಿಕ ವಾಸ್ತು ಜ್ಞಾನ ಸ್ಥಳೀಯವಾಗಿದ್ದು ಪರಂಪರೆಯಿಂದಾಗಿ ಮುಂದುವರೆದಿದೆ. ಗಾಣ ರಚಿತೆ, ಅಂಗಡಿಗಳು, ಸಣ್ಣಸೂತ್ರ, ಗಂಗ ಮಾಡುವ -ಪದರ ಬಳುಬಳು ರೇಖೆ ಮುಟ್ಟ ಕಟ್ಟುವುದು ಇಂತಹ ಹಲವು ಗ್ರಾಮೀಣ ಭಾರತದಲ್ಲಿ ಪ್ರಚಲಿತವಾಗಿವೆ. ಈ ಪಾರಂಪರಿಕ ವಾಸ್ತು ಜ್ಞಾನ ಭಾರತೀಯರ ಸಂಪತ್ತಾಗಿದೆ.

ಸ್ವಸಹಾಯ ಉಪ್ಪು ಬೆಳೆ ದಂತ ಆರೋಗ್ಯ ಕಾಪಾಡುವ ಜನರಿಗೆ ಆಧುನಿಕ ಇಂಗ್ಲಿಷ್ ಕಂಪನಿ ಪೇಸ್ಟ್ ಪರಿಚಯವನ್ನು ಮಾಡುತ್ತಾರೆ. ವೈದ್ಯರೇ ಕಾಲೇಜು, ವಿಶ್ವವಿದ್ಯಾಲಯ ಪದವಿ ಪಡೆಯದೆ ತನ್ನ ಪಾರಂಪರಿಕ ಜ್ಞಾನದಿಂದ ನಾಟಿಯಾರು ಚಿಕಿತ್ಸೆ ಮಾಡಿ ಪ್ರಸಿದ್ಧರಾಗಿದ್ದಾರೆ.

Scanned with CamScanner

B.L.D.E. Association's

# S. B. Arts & K.C.P. Science College, VIJAYAPUR- 586 103.

Estd 1945 • ಸ್ಥಾಪನೆ 1945

# ASSIGNMENT

For B.A./ ~~B.Sc.~~ III rd Semester

2022 - 2023

Name of the Student Sushmita.M.Hiremath

Roll No. 08 R.C.U. Seat No. U15KM22A0115

Subject History - DSC-6

| Assignment No. | Date | Marks Assigned | Marks Obtained | Name and Signature of Teacher | Remarks |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| | | | | | |
| | | | | | |
| | | | | | |

Scanned with CamScanner

# Assignment topic

ಖಲೀಫರ 2ನೇ
ಇಸ್ಲಾಂ ಧರ್ಮಕ್ಕೆ
ಸಾಂಸ್ಕೃತಿಕ ಕೊಡುಗೆಗಳು

Guided by
Prof. G. S. Reddy sir
Dept. of History

Scanned with CamScanner

# Index


| ಕ್ರ.ಸಂ | ವಿಷಯ | ಪು.ಸಂ |
|---|---|---|
| 1 | ಪೀಠಿಕೆ | 1 |
| 2 | ಎರಡನೇ ನ್ಯಾಯಾಂ ಅಶೋಲ್ ಶಾಸನ ಪರಂಪರೆ ಬೆಳವನ | 1 |
| 3 | ನ್ಯಾಯಾಂನ ವ್ಯಕ್ತಿತ್ವ | 3 |
| 4) | ನ್ಯಾಯಾಂನ ಕೊಡುಗೆಗಳು | 5-9 |
| 5 | ನ್ಯಾಯಾಂನ ಮಹತ್ವತೆ | 9 |
| 6 | ಉಪಸಂಹಾರ | 11 |


Scanned with CamScanner

## ಬಿಜಾಪುರದ 2 ನೇ ಇಬ್ರಾಹಿಂ ಆದಿಲ್ ಶಾನ ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸಿ

**ಪೀಠಿಕೆ:**

1490 ರಲ್ಲಿ ಆದಿಲ್ ಶಾಹಿ ರಾಜ್ಯ ಬಿಜಾಪುರದಲ್ಲಿ ಸ್ಥಾಪನೆಯಾಯಿತು. ಬಹಮನಿ ಸುಲ್ತಾನರ ಅಸಮರ್ಥತೆಯ ಲಾಭ ಪಡೆದ ಯುಸೂಫ್ ಆದಿಲ್ ಖಾನನು ತನ್ನ ಸ್ವತಂತ್ರ ಬಿಜಾಪುರ ಅಧಿಪತ್ಯವನ್ನು ಸ್ಥಾಪಿಸಿದನು ನಂತರ ಇದು ಆದಿಲ್ ಶಾಹಿ ಮನೆತನವಾಯಿತು.

### ಎರಡನೇ ಇಬ್ರಾಹಿಂ ಆದಿಲ್ ಶಾಹನ ಆರಂಭಿಕ ಜೀವನ

ಎರಡನೇ ಇಬ್ರಾಹಿಂ ಆದಿಲ್ ಶಾಹ



ಎರಡನೇ ಇಬ್ರಾಹಿಂ ಆದಿಲ್ ಶಾಹನು ಅಧಿಕಾರಕ್ಕೆ ಬಂದಾಗ ಈತನು ಕೇವಲ ಒಂಬತ್ತು ವರ್ಷದ ಬಾಲಕ. ವಿಧವಾ ರಾಣಿ ಚಾಂದಬೀಬಿಯು ಈತನ ರಕ್ಷಕಳಾಗಿಯೂ ಮತ್ತು ಕಮಿಲಖಾನನು ಈತನ ರಾಜಪ್ರತಿನಿಧಿಯಾಗಿ ಜವಾಬ್ದಾರಿಯುತ ಕಾರ್ಯಗಳನ್ನು ನಿರ್ವಹಿಸಿದನು. ಈ ಅವಧಿಯು ಆದಿಲ್ ಶಾಹಿಯ ಉಚ್ಛ್ರಾಯದ ಯುಗವೆಂದು ಕರೆಯಲ್ಪಟ್ಟಿದೆ.

ಬಾಲಕ ಇಬ್ರಾಹಿಂ ರಕ್ಷಕಳಾಗಿ ಚಾಂದಬೀಬಿ ಅನೇಕ ದಿಟ್ಟ ಕಾರ್ಯಗಳನ್ನು ಕೈಗೊಂಡಳು. ಬಿಜಾಪುರದ ಸುಲ್ತಾನರ ರಾಜ ಮತ್ತು ಆದಿಲ್ ಶಾಹಿ ರಾಜವಂಶದ ಸದಸ್ಯ. ಅವನ ಆಳ್ವಿಕೆಯ ಅಡಿಯಲ್ಲಿ ರಾಜವಂಶವು ಅವರ ಶ್ರೇಷ್ಠ ಅವಧಿಯನ್ನು ತಲುಪಿತು.

## ಇಬ್ರಾಹಿಂನ ವ್ಯಕ್ತಿತ್ವ :

ಎರಡನೇ ಇಬ್ರಾಹಿಂ ಬಿಜಾಪುರದ ಸುಲ್ತಾನನಾಗಿ ಅಧಿಕಾರವಹಿಸಿಕೊಂಡಾಗ ಆತನಿನ್ನೂ ಅಪ್ರಾಪ್ತನಾಗಿದ್ದನು. ಆದ್ದರಿಂದ ರಾಣಿ ಚಾಂದಬೀಬಿಯೇ ಆತನ ರಕ್ಷಕಳಾಗಿದ್ದಳು. ರಾಜನೀತಿಗೆ ಅನರ್ಹರಾದ ಮತ್ತು ಅಂತಹ ಕೆಟ್ಟ ಪರಿಸ್ಥಿತಿಗೂ ಎದೆಗುಂದದ ಎದೆಗಾರಿಕೆಯನ್ನು ಬಿಟ್ಟು ಬಿಡದ ಮುತ್ಸದ್ದಿ ಆಗಿದ್ದಳು. ಮುತ್ಸದ್ದಿಯಾದರೂ ಮೊಘಲ್ ಸೈನ್ಯವನ್ನು ಧೈರ್ಯತನದಿಂ-ದಲೇ ಎದುರಿಸಿ ಹಿಮ್ಮೆಟ್ಟಿಸಿದ ವೀರರಾಣಿ. ಬಿಜಾಪುರದ ರಾಜಪ್ರತಿನಿಧಿಗಳ ಸಾಲು ಕೊಲೆಗಳನ್ನು ಕಂಡ ಇಬ್ರಾಹಿಂನು ಸ್ವಲ್ಪವೂ ವಿಚಲಿತನಾಗಲಿಲ್ಲ. ನಂತರ ಎಲ್ಲ ಸಮಸ್ಯೆಗಳನ್ನು ಸಮರ್ಥವಾಗಿಯೇ ಎದುರಿಸಿದನು.

ಇಬ್ರಾಹಿಂನು ಬಿಜಾಪುರ ಸುಲ್ತಾನರಲ್ಲಿಯೇ ಉದಾರ ಮತ್ತು ಸಭ್ಯನಾದ ಸುಲ್ತಾನನಾಗಿದ್ದನು. ಈತನ ಯುಗ ಪ್ರಗತಿಪರ ವಿಚಾರಗಳ ಕಾಲವಾಗಿತ್ತು. ಅಂತೆಯೇ ರಾಜ್ಯದ ಉನ್ನತಿಗೆ ಈತನ ಕೊಡುಗೆ ಅಪಾರವಾದದ್ದು. ಜಾತಿ-ಮತ-ಭೇದವೆನ್ನದೇ ಎಲ್ಲ ಧರ್ಮಗಳನ್ನು ಸಮಾನ ದೃಷ್ಟಿಯಿಂದ ಕಂಡನು. ಸುನ್ನಿ ಪಂಥೀಯನಾಗಿದ್ದರೂ ಕೂಡ ಶಿಯಾಗಳಿಗೆ ಅಥವಾ ಮುಸ್ಲಿಮೇತರರಿಗೆ ಸಹಿಷ್ಣು ಭಾವನೆ ತೋರಿದ್ದನು. ಬಹಳಷ್ಟು ಹಿಂದೂಗಳು ಅದರಲ್ಲೂ ಬ್ರಾಹ್ಮಣರು ಮತ್ತು ಮರಾಠರು ಆಡಳಿತಾತ್ಮಕ ಮತ್ತು ಸೈನ್ಯದ ಉನ್ನತ ಹುದ್ದೆಗಳನ್ನಲಂಕರಿಸಿದ್ದರು. ಈತನ ಆಸ್ಥಾನ ಕವಿಯಾದ ಫೆರಿಸ್ತಾ "ಜಗದ್ಗುರು" ಎಂದು ಕರೆಯಿಸಿಕೊಂಡ ಇಬ್ರಾಹಿಂನು ಜನಪ್ರಿಯತೆಗೆ ಪಾತ್ರನಾಗಿದ್ದನು" ಎಂದು ಬರೆಯುತ್ತಾನೆ. ಆಡಳಿತ ಸುಧಾರಣೆಯಲ್ಲಿ ಅಧಿಕ ಆಸಕ್ತಿ ಹೊಂದಿದ ಈತನು ಮೊಘಲ್ ಅರ್ಥಮಂತ್ರಿ ತೋಡರಮಲ್ಲನ ಭೂಕಂದಾಯ ನೀತಿಯನ್ನು ಕೆಲವು ಬದಲಾವಣೆಗಳೊಂದಿಗೆ ತನ್ನ ರಾಜ್ಯದಲ್ಲಿಯೂ ಜಾರಿಗೆ ತಂದನು.

Scanned with CamScanner

5 ಆದಿಲ್ ಶಾಹಿ II ಯ ಕೊಡುಗೆಗಳು.

## ಇಬ್ರಾಹಿಂ ರೋಜಾ (1626)



ಇದನ್ನು ಪ್ರಸಿದ್ಧ ಶಿಲ್ಪಿ ಮಲಿಕ್ ಸಂದಲ್‌ನ ಮಾರ್ಗದರ್ಶನದಲ್ಲಿ ಎರಡನೇ ಇಬ್ರಾಹಿಂನ ಕಾಲದಲ್ಲಿ ನಿರ್ಮಿಸಲಾಯಿತು. ಇದರ ಒಳ ಭಾಗದಲ್ಲಿ ಎರಡನೆ ಇಬ್ರಾಹಿಂ ಮತ್ತು ಅವನ ರಾಣಿ ತಾಜ್ ಸುಲ್ತಾನ್ ಮತ್ತು ಮಕ್ಕಳ ಗೋರಿಗಳಿವೆ. ಇದನ್ನು 450 ಚದುರ ಅಡಿ ವಿಸ್ತಾರದಲ್ಲಿ ನಿರ್ಮಿಸಲಾಗಿದ್ದು, ಗೋಡೆಗಳ ಮೇಲೆ ಅಲಂಕೃತ ಉಬ್ಬು ಕೆತ್ತನೆಗಳು ಮತ್ತು ಕುರಾನಿನ 6666 ಸೂಕ್ತಿಗಳನ್ನು ಕೆತ್ತಲಾಗಿದೆ. ಆದ್ದರಿಂದ ಇದನ್ನು 'ಕುರಾನ ಮಹಲ್' ಎಂದು ಕರೆಯಲಾಗಿದೆ. ಇದರ ಬಾಗಿಲುಗಳು ಮತ್ತು ಕಿಟಕಿಗಳು ಸುಂದರ ಕುಸುರಿ ಕೆತ್ತನೆಯಿಂದ ಕೂಡಿವೆ. ಇದು ಇಸ್ಲಾಂ ಶೈಲಿಯ ಅತ್ಯಂತ ಉತ್ತಮ ಕಟ್ಟಡಗಳಲ್ಲಿ ಒಂದಾಗಿದ್ದು, ಸೌಂದರ್ಯದಲ್ಲಿ ಈ ಕಟ್ಟಡಕ್ಕೆ ಸಮನಾದುದು ಬೇರೊಂದಿಲ್ಲ. ಇದರೊಳಗಡೆ ಆಧಾರವಿಲ್ಲದೇ ನಿಂತಿರುವ ಛಾವಣಿ ಇದರ ವೈಶಿಷ್ಟ್ಯವಾಗಿದೆ.

Scanned with CamScanner

## ಎರಡನೇ ಇಬ್ರಾಹಿಂ ಆದಿಲ್ ಶಾಹನ ಸಾಂಸ್ಕೃತಿಕ ಕೊಡುಗೆಗಳು.

ಎರಡನೇ ಇಬ್ರಾಹಿಂ ಆದಿಲ್ ಶಾಹನು ಕವಿಯೂ - ಕವಿಜನಾಶ್ರಯನೂ ಆಗಿದ್ದ. ಈತನು ಕವಿತೆಗಳನ್ನೊಳಗೊಂಡ ಕಿತಾಬ್-ಇ-ನವರಸ (ಈ ಗ್ರಂಥವನ್ನು ಗಣಪತಿ ಮತ್ತು ಸರಸ್ವತಿ ಸ್ತೋತ್ರದೊಂದಿಗೆ ಆರಂಭಿಸಿದ್ದಾನೆ) ಎಂಬ ಗ್ರಂಥದ ಲೇಖಕನೂ ಹೌದು. ತಾರೀಖ್-ಇ-ಫೆರಿಸ್ತಾ ಗ್ರಂಥದ ಆಸಕ್ತಿಯನ್ನು ಕೆರಳಿದ ಇಬ್ರಾಹಿಂನು ಅನೇಕ ಸುಂದರ ಕಟ್ಟಡಗಳ ನಿರ್ಮಾತೃಕನೂ ಆಗಿದ್ದಾನೆ. ಆನಂದ ಮಹಲನ್ನು ಬಿಜಾಪುರದ ಕೋಟೆಯಲ್ಲಿ ನಿರ್ಮಿಸಿದನು. ಮೆಹತರ್ ಮಹಲ್, ಮಲಿಕ್ ಜಹಾನ್ ಮಸೀದಿ. ತನ್ನ ಪುತ್ರಿಯ ಜೋಲಿ-ತಾಜ್ ಸುಲ್ತಾನ್ ಮತ್ತು ಆತನ ಇಬ್ರಾಹಿಂ ರೋಜಾ ಇವುಗಳು ಆತನು ಕಟ್ಟಿಸಿದ ಪ್ರಮುಖ ಕಟ್ಟಡಗಳಾಗಿವೆ.

### ಸಂಗೀತ ಮಹಲ್



ಎರಡನೇ ಇಬ್ರಾಹಿಂ ಆದಿಲ್ ಶಾಹನು ಸಂಗೀತದ ಬಗ್ಗೆ ಅಪಾರ ಜ್ಞಾನವನ್ನು ಹೊಂದಿದ್ದ. ಇಬ್ರಾಹಿಂ 'ಕಿತಾಬ್‌ನವರಸ' ಎಂಬ ಸಂಗೀತ ಕೃತಿ ರಚಿಸಿದ್ದಾನೆ. ಇವನ ಆಸ್ಥಾನದಲ್ಲಿದ್ದ ಪ್ರಸಿದ್ಧ 'ನವರಸ' ಎಂಬ ಸಂಗೀತಗಾರ ಮರಣ ಹೊಂದಿದಾಗ ಅವನ ನೆನಪಿಗಾಗಿ ನವರಸಪುರ ಎಂಬ ಪಟ್ಟಣವನ್ನು ಕಟ್ಟಿಸಿದನು.

## ಕಿತಾಬ್ - ಎ - ನವ್ರಸ

ಎರಡನೇ ಇಬ್ರಾಹಿಂ ಆದಿಲ್‌ಶಾಹಿಯು ಕಿತಾಬ್-ಎ-ನವರಸ್ (ಒಂಬತ್ತು ರಸಗಳ ಪುಸ್ತಕ) ಎಂಬ ಪುಸ್ತಕವನ್ನು ಬರೆದರು. ಇದು 59 ಕವನಗಳು ಮತ್ತು 17 ದ್ವಿಪದಿಗಳ ಸಂಗ್ರಹವಾಗಿದೆ. ಅವರ ಆಸ್ಥಾನ-ಕವಿ ಮಹಮ್ಮದ್ ಜುಹುರಿ ಪ್ರಕಾರ, ಅವರು ಒಂಬತ್ತು ರಸಗಳ ಸಿದ್ಧಾಂತವನ್ನು ಪರಿಚಯಿಸಲು ಬರೆದಿದ್ದಾರೆ. ಇದು ಭಾರತೀಯ ಸೌಂದರ್ಯಶಾಸ್ತ್ರದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಪರ್ಷಿಯನ್ ಭಾಷೆಯನ್ನು ಮಾತ್ರ ತಿಳಿದಿರುವ ಜನರನ್ನು ಪರಿಚಯಿಸಲು. ಕಲಿಕೆಯ ದೇವತೆಯಾದ ಸರಸ್ವತಿಯ ಪ್ರಾರ್ಥನೆಯೊಂದಿಗೆ ಪುಸ್ತಕವು ತೆರೆಯುತ್ತದೆ.

## ಎರಡನೇ ಇಬ್ರಾಹಿಂ ಆದಿಲ್ ಶಾಹನ ಆಡಳಿತ

ಇಬ್ರಾಹಿಂ ನ ಕಾಲದಲ್ಲಿ ಅನೇಕ ದಂಗೆಗಳು ಕಾಣಿಸಿಕೊಂಡವು. ಇಬ್ರಾಹಿಂನ ದಂಡನಾಯಕ ಅಬ್ಜಲ್ ಖಾನ್ ಈ ದಂಗೆಗಳು ಕಾಣಿಸಿಕೊಂಡವು. ಇಬ್ರಾಹಿಂನು ಅಹಮದ್‌ನಗರದ ಸುಲ್ತಾನ ಮುರ್ತಜಾ ನಿಜಾಂಶಾನು. ಸೋಲಾಪುರದ ಮೇಲೆ ದಾಳಿ ಮಾಡಿದನು. ಇಬ್ರಾಹಿಂ ಅವನನ್ನು ಸೋಲಿಸಿ ಓಡಿಸಿದನು. 1600 ರಲ್ಲಿ ದೆಹಲಿ ಮೊಗಲ್‌ದೊರೆ ಅಕ್ಬರನು ಬಿಜಾಪುರದ ಮೇಲೆ ದಾಳಿ ಮಾಡಿ ಇಬ್ರಾಹಿಂನನ್ನು ಸೋಲಿಸಿದನು. ಇದರಿಂದ ಸುಲ್ತಾನನು 1604 ರಲ್ಲಿ ಅಕ್ಬರನ ಮಗ ದಾನಿಯಾಲ್‌ನಿಗೆ ತನ್ನ ಮಗಳನ್ನು ವಿವಾಹ ಮಾಡಿಕೊಟ್ಟನು. 1619 ರಲ್ಲಿ ಇಬ್ರಾಹಿಂ ಬೀದರ್‌ದ ಮೇಲೆ ದಾಳಿಮಾಡಿ, ಅದನ್ನು ವಶಪಡಿಸಿಕೊಂಡು, ಬರೀದ್ ಷಾಹಿ ವಂಶವನ್ನು ಕೊನೆಗಾಣಿಸಿದನು. 1624 ರಲ್ಲಿ ಮಲಿಕ್ ಅಂಬರನು ಗೋಲ್ಕೊಂಡದ ಕುತುಬ್‌ಷಾನ ನೆರವಿನೊಂದಿಗೆ ಬಿಜಾಪುರವನ್ನು ವಶಪಡಿಸಿಕೊಂಡನು

## ಉಪಸಂಹಾರ :-

ಇಬ್ರಾಹಿಂ ಆದಿಲ್ ಶಾನು ವಾಸ್ತುಶಿಲ್ಪ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾನೆ. ಬಿಜಾಪುರದಲ್ಲಿ ಸಾತ್ ಮಂಜಿಲ್, ಆನಂದ ಮಹಲ್, ಮಿಹತರ್ ಮಹಲ್, ಮಾಲಿಕಾ ಜಹಾನ್, ಸಂಗೀತ ಮಹಲ್ ಇಬ್ರಾಹಿಂ ರೋಜಾಗಳನ್ನು ಕಟ್ಟಿಸಿದ್ದಾನೆ. ಇಬ್ರಾಹಿಂ ರೋಜಾ ಚಿತ್ರಕಲೆಗೆ ಹಾಗೂ ಅಲಂಕಾರಕ್ಕೆ ಹೆಸರಾಗಿದ್ದು 'ಮಿನಿ ತಾಜಮಹಲ್' ಎಂದೇ ಕರೆಯಲ್ಪಡುತ್ತಿದೆ. ಹಿಂದೂ ಧರ್ಮದ ಬಗೆ ಅಪಾರ ಗೌರವ ಹೊಂದಿದ್ದ ಇಬ್ರಾಹಿಂನನ್ನು "ಜಗದ್ಗುರು ಬಾದ್ ಶಾ" ಎಂದು ಕರೆಯಲಾಗಿದೆ.

B.L.D.E. Association's

# S. B. Arts & K.C.P. Science College, VIJAYAPUR- 586 103.

For B.A./ ~~B.Sc.~~ ....V....... Semester

2022 - 2023

Name of the Student Neha. S. Pantrosh

Roll No. 08 R.C.U. Seat No. U15KM21A0014

Subject Socio-Religious Reforms & Indian National Movement (1828-1947) - DSC-11

| Assignment No. | Date | Marks Assigned | Marks Obtained | Name and Signature of Teacher | Remarks |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| | | | | | |
| | | | | | |
| | | | | | |

* ವಿಷಯ :-

# ನಾಲ್ವಡಿ ಕೃಷ್ಣರಾಜ ಒಡೆಯರ್

## 1884 - 1940

Scanned with CamScanner

# - ಪರಿವಿಡಿ -


| ಕ್ರ.ಸಂ. | ವಿಷಯಗಳು | ಪುಟ.ಸಂ. |
|---|---|---|
| 01. | ಪೀಠಿಕೆ | 01-02 |
| 02. | ರಾಜಕೀಯ ಸಂಸ್ಕೃತಿ | 02-03 |
| 03. | ನಾಲ್ವಡಿ ಕೃಷ್ಣರಾಜ ಒಡೆಯರ | 04-06 |
| 04. | ಆರಂಭಿಕ ಜೀವನ. | 06-07 |
| 05. | ಸುಧಾರಣೆಗಳು | 07-09 |
| 06. | ಪ್ರಮುಖ ಯೋಜನೆಗಳು | 10-12 |
| 07. | ಸಮಾರೋಪ | 12 |


ಮಾರ್ಗದರ್ಶಕರು,

prof. Girish. Reddy

(Dept of History)

Scanned with CamScanner

# ① ನಾಲ್ವಡಿ ಕೃಷ್ಣರಾಜ ಒಡೆಯರ (1884-1940) :-

## * ಪೀಠಿಕೆ :-

ಜೂನ್ 4,1884 ರಲ್ಲಿ ಜನಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ ಅವರು ಮೈಸೂರು ಸಂಸ್ಥಾನ ಅಭಿವೃದ್ಧಿಗಾಗಿ ಸರ್ವಾಂಗೀಣ ಪ್ರಗತಿ ತಂದು ಚಿರಸ್ಮರಣೀಯರಾದವರು. ಆಧುನಿಕ ಭಾರತದಲ್ಲಿ ಸರ್ವಾಂಗೀಣ ಅಭಿವೃದ್ಧಿ ಸಾಧಿಸಿದ ಪ್ರಪ್ರಥಮ ರಾಜ್ಯವೆಂದರೆ ಅದು ಮೈಸೂರು ರಾಜ್ಯ. ನಾಲ್ವಡಿಯವರ ಆಳ್ವಿಕೆಯ ಕಾಲವು ಎಲ್ಲಾ ರಂಗಗಳಲ್ಲಿ ಪ್ರಗತಿಯನ್ನು ಸಾಧಿಸಿ ಭಾರತದಲ್ಲಿ ಸುವರ್ಣಯುಗದ ಕಾಲವಾಗಿತ್ತು. ಸರ್ವ ಕಾಲದಲ್ಲೂ ರಾಜರು ಆಳ್ವರು ಇದ್ದಿರುತ್ತಾರೆ. ಆ ರಾಜರುಗಳ ಕಾರ್ಯದಕ್ಷತೆ ತೋರಿದಂತ ಅವಕಾಶ, ಸ್ವತಂತ್ರ ಅಧಿಕಾರಗಳನ್ನು ನೀಡುವ ಮನೋಬಲ ರಾಜ್ಯಭಾರದವರಿಗೆ ಇದ್ದಾಗ ಮಾತ್ರವೇ ಅದು ಸಾಧ್ಯ ಎಂಬುದು ಅರ್ಥಪೂರ್ಣ ಮುಖ್ಯ ಸಂಗತಿಯಾಗಿದೆ.

## * ರಾಜಕೀಯ ಹಿನ್ನೆಲೆ :-

1799 ರಲ್ಲಿ ಒಡೆಯರಿಗೆ ಹಿಂತಿರುಗಿಸಿದ್ದ ಮೈಸೂರಿನ ಆಳ್ವಿಕೆಯನ್ನು 1831 ರ ನಗರ ದಂಗೆಯ ನಂತರ ಬ್ರಿಟಿಷರು ನೇರ ಆಳ್ವಿಕೆಗೆ ಒಳಪಡಿಸಿದರು. ಇದರಿಂದ ಸ್ವತಂತ್ರ ಅಸ್ತಿತ್ವಕ್ಕೆ ಧಕ್ಕೆಯಾಗಿ ಇಲ್ಲಿ, ಆಡಳಿತವನ್ನು ನೋಡಿಕೊಳ್ಳಲು ಕಮೀಷನರುಗಳನ್ನು ನೇಮಿಸಲಾಗಿತ್ತು. 1831 ರಿಂದ 1881 ರ ವರೆಗಿನ ಕಮೀಷನರರ ನೇರ ಆಳ್ವಿಕೆಯು ಮೈಸೂರು ಒಂದು ಮಾದರಿ ರಾಜ್ಯವಾಗಲು ಬುನಾದಿಯನ್ನು ಹಾಕಿತು. ಈ ಅವಧಿಯಲ್ಲಿ ಎಲ್ಲ ಜನ ಕಮೀಷನರುಗಳು ಆಳಿದರು. ಅದರಲ್ಲಿ ಪ್ರಮುಖರಾದವರೆಂದರೆ ಮಾರ್ಕ್ ಕಬ್ಬನ್ & ಲೆವಿನ್ ಬೆಂಥಾಮ್ ಬೌರಿಂಗ್. 1870 ರಲ್ಲಿ ಕಮೀಷನರ್ ಹುದ್ದೆಗೆ ಬೌರಿಂಗ್‌ನು ರಾಜೀನಾಮೆ ನೀಡಿದನು.

ಕಮೀಷನರ್‌ಗಳು ಮೈಸೂರು ರಾಜ್ಯದ ಅಭಿವೃದ್ಧಿಗೆ ಬುನಾದಿಯನ್ನು ಹಾಕಿದರು. 1881 ರಲ್ಲಿ ರಾಜ್ಯವನ್ನು ಹತ್ತನೆಯ ಚಾಮರಾಜ ಒಡೆಯರಿಗೆ ಪುನಃ ಹಸ್ತಾಂತರಿಸಲಾಯಿತು. ಅವರು 1894 ರವರೆಗೆ ಆಳ್ವಿಕೆ ಮಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರು ಇವರ

Scanned with CamScanner

ಉತ್ತರಾಧಿಕಾರಿಯಾದರು. ಈ ಇಬ್ಬರು ಅರಸರ ಆಳ್ವಿಕೆಯಲ್ಲಿ ಮೈಸೂರು ಮಹಾನ್ ದಿವಾನರ ಸೇವೆಯನ್ನು ಪಡೆದುಕೊಂಡಿತು. ಅವರಲ್ಲಿ ಪ್ರಮುಖರೆಂದರೆ ಸರ್ ಎಂ. ವಿಶ್ವೇಶ್ವರಯ್ಯ ಮತ್ತು ಸರ್. ಮಿರ್ಜಾ ಇಸ್ಮಾಯಿಲ್. ಮೈಸೂರು "ಮಾದರಿ ರಾಜ್ಯ" ಎಂಬ ಬಿರುದು ಗಳಿಸಲು ಇವರು ಕಾರಣೀಭೂತರಾದರು.

## * ನಾಲ್ವಡಿ ಕೃಷ್ಣರಾಜ ಒಡೆಯರ (1902 - 1940) —

### * ಆರಂಭಿಕ ಜೀವನ :—



ನಾಲ್ವಡಿ ಕೃಷ್ಣರಾಜ ಒಡೆಯರ್ —

* **ಜನನ** :- 4, ಜೂನ್, 1884 ಮೈಸೂರು.

* **ತಂದೆ, ತಾಯಿ** :- ತಂದೆ - 10 ನೇ ಚಾಮರಾಜೇಂದ್ರ ಒಡೆಯರ್.
  ತಾಯಿ - ಕೆಂಪನಂಜಮ್ಮಣಿ ದೇವಿ.

* **ಸಂಗಾತಿಯ** :- ಕಾಠ್ಯಾವಾಡದ ಮಹಾರಾಣಿ ವಣಿಕಾನೇರ್ ಸಂಸ್ಥಾನ ಶ್ರೀ ಪ್ರತಾಪ ಕುಮಾರಿಬಾಯಿ ದೇವಿ ಅಮ್ಮಣಿ ಅವರು.

* **ಪಟ್ಟಾಭಿಷೇಕ** :- 1 - ಫೆಬ್ರವರಿ - 1895

— ನಾಲ್ವಡಿಯವರ ತಂದೆ-ತಾಯಿ — 

— "ವಾಣಿವಿಲಾಸ ಸನ್ನಿಧಾನದ ಚಿತ್ರ" — 

ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದ ಒಡೆಯರ ರಾಜಸಂತತಿಯ 24 ನೇ ರಾಜರು. ಇವರ ಆಳ್ವಿಕೆ 1902 ರಿಂದ 1940 ರವರೆಗೆ ನಡೆಯಿತು.

1895 ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಪಟ್ಟಾಭಿಷೇಕವಾದಾಗ ಕೇವಲ 10 ವರ್ಷದ ಬಾಲಕರಾಗಿದ್ದರಿಂದ ಅವರ ತಾಯಿಯವರಾದ ಮಹಾಶ್ರೀ ಮಹಾರಾಣಿ ವಾಣಿವಿಲಾಸ ಸನ್ನಿಧಾನದವರು ರೀಜೆಂಟ್ ಆಗಿ ಆಡಳಿತ ನಿರ್ವಹಣೆ ಮಾಡಿದರು. ರಾಜಮನೆತನಕ್ಕೆ ಸೂಕ್ತ ಮಾರ್ಗದರ್ಶನ, ಆಡಳಿತ ತರಬೇತಿ ಇವುಗಳನ್ನು ಮಹಾರಾಣಿಯವರು ಚೆನ್ನಾಗಿ ನಡೆಸಿದುದರ ಪರಿಣಾಮವಾಗಿ, ಮೈಸೂರು ರಾಜ್ಯಕ್ಕೆ ಒಬ್ಬ ಸಮರ್ಥ ಆಡಳಿತಗಾರರಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ದೊರಕಿದರು.

## * ಶಿಕ್ಷಣ —

ಕನ್ನಡ, ಸಂಸ್ಕೃತ, ಉರ್ದು, ಇಂಗ್ಲೀಷ್ & ಭಾಷೆ ಜ್ಞಾನದಲ್ಲಿ ಶಿಕ್ಷಣ ಪಡೆದರು. ಇವರ ಪ್ರಾಥಮಿಕ ಶಿಕ್ಷಣವನ್ನು "ಪಿ. ರಘುನಾಥರಾವ್" ಎಂಬುವವರ ಮಾರ್ಗದರ್ಶನದ ಮೇರೆಗೆ ರಾಜಭವನದ 'ಎಂಬ ಶಾಲೆಯಲ್ಲಿ ಇವರಿಗೆ ಶಿಕ್ಷಣದ ವ್ಯವಸ್ಥೆ ಮಾಡಲಾಯಿತು. ಇವರ ಉನ್ನತ ಶಿಕ್ಷಣಕ್ಕಾಗಿ ಇವರಿಗೆ ಸರ್ ಫ್ರೇಸರ್ ರ ಬಳಿ ಸೌಕರ್ಯ ಒದಗಿಸಲಾಯಿತು.

Scanned with CamScanner

ಅನಾರೋಗ್ಯದ ನಿಮಿತ್ತ ಮತ್ತೆ ಮೈಸೂರಿಗೆ ಮರಳಿದರು. ಇದರಿಂದ ಮೈಸೂರಿನಲ್ಲಿ ಹಲವಾರು ಶಿಕ್ಷಕರನ್ನು ನೇಮಕ ಮಾಡಿ ಶಿಕ್ಷಣ ನೀಡಲಾಯಿತು. ಪಿ. ಜೆ. ಮೆಲ್ಲೆ & ಟ್ರೈನರ್ ಇವರ ಪ್ರಮುಖ ಶಿಕ್ಷಕರು. ಇವರಿಂದ ನಾಲ್ವಡಿ ಕೃಷ್ಣರಾಜ ಒಡೆಯರು ಸಂಸ್ಕೃತ ಇಂಗ್ಲೀಷ್, ನ್ಯಾಯಶಾಸ್ತ್ರ & ತತ್ವಶಾಸ್ತ್ರ ವನ್ನು ಮುಖ್ಯವಾಗಿ ಭೋಧಿಸಲಾಯಿತು.

ಕ್ರಿ.ಶ. 1900 ರಲ್ಲಿ ಕಾಠಿಯಾವಾಡದ ಮಹಾರಾಣ ಸರತಿಂಹರ ಪುತ್ರಿ ಪ್ರತಾಪಕುಮಾರಿಯವರೊಂದಿಗೆ ವಿವಾಹವಾದರು. ಪ್ರಾಪ್ತ ವಯಸ್ಸಿಗೆ ಬಂದ ನಾಲ್ವಡಿ ಕೃಷ್ಣರಾಜ ಒಡೆಯರ ರವರನ್ನು ಫೆಬ್ರುವರಿ-1-1895 ರಲ್ಲಿ ರಾಜಪ್ರತಿನಿಧಿಯವರು ಅಧಿಕಾರ ಹಸ್ತಾಂತರಿಸಿದರು. ಇದೇ ವರ್ಷ ಆಗಸ್ಟ್-8-1902 ರಲ್ಲಿ ವೈಸರಾಯ್ ಲಾರ್ಡ್ ಕರ್ಜನ್ ರವರ ಮುಖಂಡತ್ವದಲ್ಲಿ ಮಹಾರಾಜರಿಗೆ ಜಗನ್ಮೋಹನ ಅರಮನೆಯಲ್ಲಿ ಪಟ್ಟವಾಯಿತು. ಈ ಕಾಲದ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹೆಂಡರ್ಸನ್ ಇದ್ದರು. ಇವರ ತಮ್ಮ ಕಂಠೀರವ ನರಸರಾಜ ಒಡೆಯರು ಯುವರಾಜರಾದರು.

## * ಮಾದರಿ ಮೈಸೂರು —

1902 ರ ಆಗಸ್ಟ್ 8 ರಂದು ಮೈಸೂರು ರಾಜ್ಯದ ನೇರ ಉಸ್ತುವಾರಿ ಕೃಷ್ಣರಾಜ ಒಡೆಯರ ಸುಪರ್ದಿಗೆ ಬಂದಿತು. ಆಗ ದಿವಾನರಾಗಿದ್ದ ಸರ್ ಕೆ. ಶೇಷಾದ್ರಿ ಅಯ್ಯರ್ ರವರ ಸಹಕಾರದೊಂದಿಗೆ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರು ಕಂಕಣಬದ್ಧರಾದರು.

- ಮೈಸೂರು ಅರಮನೆ -



ಇವರ ಕಾಲದಲ್ಲಿ ಇಡೀ ಭಾರತ ಒಂದರಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡುದರಿಂದ, ಮೈಸೂರು ಸಂಸ್ಥಾನಕ್ಕೆ "ಮಾದರಿ ಮೈಸೂರು" ಎಂಬ ಕೀರ್ತಿ ಲಭ್ಯವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರು ಅರಸು ಮನೆತನದಿಂದ ಬಂದವರಾಗಿದ್ದರೂ ಸಹ, ಜನತೆ ಆದ್ಯತೆಯಲ್ಲಿ ಪ್ರಾಜ್ಞಮತಿಯ ಪರರಾಗಿದ್ದರು.

Scanned with CamScanner

## * ಪ್ರಜಾ ಪ್ರತಿನಿಧಿ ಹಾಗೂ ನ್ಯಾಯ ವಿಧಾಯಕ ಸಭೆ —

ಪಾಶ್ಚಿಮಾತ್ಯ ಶಿಕ್ಷಣದಿಂದ ಪ್ರಭಾವಿತರಾದ ಇವರು ಯುರೋಪಿನಲ್ಲಾದಂತೆ ಪ್ರಗತಿ, ತಮ್ಮ ರಾಜ್ಯದಲ್ಲಿಯೂ ಆಗಬೇಕೆಂದು ಬಯಸಿ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಸುಧಾರಣೆಗಳನ್ನು ಕೈಗೊಂಡರು. ಇವರ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಹೆಸರಿಗೆ ಮಾತ್ರ ಇದ್ದ "ಪ್ರಜಾ ಪ್ರತಿನಿಧಿ ಸಭೆ"ಯು ನೂತನ ರೂಪವನ್ನು ಪಡೆದು, ಚುನಾಯಿತ ಜನ ಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. ಇದರ ಜೊತೆಗೆ 1907 ರಲ್ಲಿ "ನ್ಯಾಯ ವಿಧಾಯಕ ಸಭೆ"ಯನ್ನು ಸಹ ಸ್ಥಾಪಿಸಲಾಯಿತು. ರಾಜ್ಯದ ಸಣ್ಣ ಸಣ್ಣ ಪಟ್ಟಣಗಳಲ್ಲಿಯೂ ಮುನಿಸಿಪಾಲಿಟಿಗಳು ರಚನೆಯಾದವು. ಹಳ್ಳಿಗಳಲ್ಲಿ ಪ್ರಥಮ ಬಾರಿಗೆ ಗ್ರಾಮ ಪಂಚಾಯಿತಿಗಳು ಕಾರ್ಯ ನಿರ್ವಹಿಸಲು ಅವಕಾಶ ಮಾಡಿದುದರಿಂದ, ಗ್ರಾಮೀಣ ಪ್ರದೇಶದಲ್ಲಿ ಆಡಳಿತದಲ್ಲಿ ಜನರ ಭಾಗವಹಿಸುವಿಕೆಗೆ ಹೆಚ್ಚಿನ ಒತ್ತು ನೀಡಲಾಯಿತು.

## * ಸುಧಾರಣೆಗಳು :—

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯಲ್ಲಿ ಗ್ರಾಮ ನೈರ್ಮಲೀಕರಣ, ವೈದ್ಯಕೀಯ ಸಹಾಯ, ವಿದ್ಯಾ ಪ್ರಚಾರ, ಜೀವನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಮಾಡಳಿತ ಸಂಸ್ಥೆಗಳಾದವು. ಹೊಸ ರೈಲು ಮಾರ್ಗಗಳು ನಿರ್ಮಾಣ.

## * ಕೃಷಿ & ನೀರಾವರಿ —

"ವಾಣಿವಿಲಾಸ ಸಾಗರ"



" ಕೃಷ್ಣರಾಜ ಸಾಗರ ಜಲಾಶಯ"

ರಾಜರು ತಮ್ಮ ರಾಜ್ಯವನ್ನು ಆರ್ಥಿಕವಾಗಿ ಬಲಪಡಿಸಲು ಹಾಗೂ ನೀರಾವರಿ ಸುಧಾರಣೆಗಳನ್ನು ಕೈಗೊಂಡರು. ಕೃಷಿಗೆ ಹಣಕಾಸಿನ ನೆರವು ನೀಡಲು ಕೃಷಿ ಬ್ಯಾಂಕನ್ನು ಸ್ಥಾಪಿಸಿದರು. ಕೃಷಿ, ನೀರಾವರಿ, ಅಂತರ್ಜಲ ಬಳಕೆ ಮುಂತಾದವುಗಳ ಬಗ್ಗೆ ರೈತರಿಗೆ ತರಬೇತಿ ನೀಡಲು ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಿದರು. 1912 ರಲ್ಲಿ ವ್ಯವಸಾಯ ಇಲಾಖೆಯನ್ನು ಸ್ಥಾಪಿಸಿದರು. 1907 ರಲ್ಲಿ "ಮಾರಿಕಣಿವೆ"ಸ ಸಾಗರ & 1911 ರಲ್ಲಿ "ಕೃಷ್ಣಸಾಗರ" ಭಾರತದ ಮೊಟ್ಟಮೊದಲ ಜಲಾಶಯ 1900 ರಲ್ಲಿಯೇ ಶಿವನಸಮುದ್ರ

ಇಲ್ಲಿ ಕಾವೇರಿ ನದಿಯಿಂದ ಜಲ ವಿದ್ಯುತ್ ಕೇಂದ್ರ ಆರಂಭವಾಯಿತು. ಇದು ಭಾರತದ ಮೊದಲ ಬೃಹತ್ ಜಲ ವಿದ್ಯುತ್ ಕೇಂದ್ರ.

## * ಶೈಕ್ಷಣಿಕ ಸುಧಾರಣೆಗಳು —

ನಾಲ್ವಡಿಯವರು ಹಲವಾರು ಶಿಕ್ಷಣ ವಿಭಾಗ ಶೈಕ್ಷಣಿಕ ಸುಧಾರಣೆಗಳನ್ನು ಕೈಗೊಂಡರು 1918ರ ಸೆಪ್ಟೆಂಬರ್ 29ರಲ್ಲಿ ಜಾತಿ ಆಧಾರದ ಮೇಲೆ ಯಾರನ್ನು ಶಿಕ್ಷಣದಿಂದ ದೂರ ಇಡಬಾರದು. ಎಲ್ಲ ವರ್ಗದ ಜನರಿಗೂ ಸಮಾನ ಶಿಕ್ಷಣ ನೀಡಬೇಕೆಂದು ಆದೇಶಿಸಿದರು. ಹಿಂದುಳಿದವರು ಇರುವ ಜಿಲ್ಲಾ ಕೇಂದ್ರದ ಇದ್ದ, ಮುಸಲ್ಮಾನರ ಜಿಲ್ಲೆಗಳಲ್ಲಿ 4 ಶಾಲೆಗಳನ್ನು ಆರಂಭ. ಬೆಂಗಳೂರು ಪ್ರದೇಶದಲ್ಲಿ 5 ಶಾಲೆಗಳನ್ನು ಪ್ರಾರಂಭಿಸಿದರು. ಕೋಲಾರ ಚಿನ್ನದ ಗಣಿ ಸಮುದಾಯಕ್ಕೆ 3 ಶಾಲೆಗಳನ್ನು ಆರಂಭ. ಬಳಿಕ ಜನರಿಗಾಗಿ 32 ಶಾಲೆಗಳನ್ನು ಪ್ರಾರಂಭಿಸಿದರು. 1905ರಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದರು. ~~1913~~ 1913ರಲ್ಲಿ V.N. ಅಯ್ಯಂಗಾರ್ ಅವರು ದಲಿತ ಕೇರಿ ಸಮಿತಿ ರಚನೆ ಮಾಡಿ 15 ಶಾಲೆಗಳನ್ನು ತೆರೆದರು. ನಂತರ ಅಸ್ಪೃಶ್ಯರಿಗೆ 171 ಸರ್ಕಾರಿ ಶಾಲೆಗಳನ್ನು, 108 ಅನುದಾನಿತ ಶಾಲೆಗಳನ್ನು, 88 ಅನುದಾನ ರಹಿತ ಶಾಲೆಗಳನ್ನು ಪ್ರಾರಂಭಿಸಿದರು.

ವಯಸ್ಕರಾದ ವಿಧವೆಯರಿಗೆ ಪಾಠಶಾಲಾ ಶಾಲೆಗಳನ್ನು ತೆರೆದು ಅವರಿಗೆ ವಸತಿ ತರಗತಿಗಳನ್ನು ಪ್ರಾರಂಭಿಸಿದರು. 1915ರಲ್ಲಿ ಮಹಿಳಾ ವಸತಿಗೃಹಗಳನ್ನು ಸ್ಥಾಪನೆ. 1913ರಲ್ಲಿ ಮಹಾರಾಣಿಯವರ ಹೆಸರು Girls ಶಾಲೆಯನ್ನು ತೆರೆದು ಮಹಿಳೆಯರಿಗಾಗಿ 83 ಶಾಲೆಗಳನ್ನು ಪ್ರಾರಂಭ. 1913ರಲ್ಲಿ ಪ್ರಾಥಮಿಕ ಶಿಕ್ಷಣ ಎಲ್ಲರಿಗೂ ಕಡ್ಡಾಯ ಎಂದು ಘೋಷಣೆ. 1915ರಲ್ಲಿ ಮುಸ್ಲಿಂ ಧರ್ಮೀಯರಿಗೆ ಪ್ರತ್ಯೇಕ ಉರ್ದು ಶಾಲೆಗಳನ್ನು ತೆರೆದು ಶಿಕ್ಷಣವನ್ನು ಕಡ್ಡಾಯಗೊಳಿಸಿದರು. ಅವರು ರಾತ್ರಿ ಸಮಯದಲ್ಲಿ ಅಕ್ಷರ ಶಾಲೆಗಳ ಆರಂಭ. 1912ರಲ್ಲಿ 7,000 ಸಾಕ್ಷರತಾ ಕೇಂದ್ರಗಳಲ್ಲಿ ಗ್ರಾಮೀಣ ಜನರಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಸಾರಾಂಗವನ್ನು ಆರಂಭ. 1917ರ ಅಕ್ಟೋಬರ್ 12ರಂದು ಭಾರತದಲ್ಲಿಯೇ ಪ್ರಪ್ರಥಮ ಬಾರಿಗೆ "ಮೈಸೂರು ವಿಶ್ವವಿದ್ಯಾಲಯದ" ಸ್ಥಾಪನೆ. 1914-15ರಲ್ಲಿ ಬಡತನದಿಂದ ಶಾಲೆಗೆ ಹೋಗದ ಗ್ರಾಮೀಣ ಭಾಗದ ಬಾಲಕರಿಗೆ ಸಂಚಾರಿ ಶಿಕ್ಷಣವನ್ನು ಪ್ರಾರಂಭ. ತುಮಕೂರಿನಲ್ಲಿ ಶಿಕ್ಷಕರ ತರಬೇತಿ ಶಾಲೆ ಆರಂಭ. 1919ರಲ್ಲಿ ಮಾಧ್ಯಮಿಕ ಶಿಕ್ಷಣದ



"1st Mysore University"

ಕುಲುವನ್ನು ರದ್ದು ಮಾಡಿದರು.

## * ಆರ್ಥಿಕ & ಆರೋಗ್ಯ ಸುಧಾರಣೆ —

ಇವರು ರಾಜ್ಯದ ನಾನಾ ಭಾಗಗಳಲ್ಲಿ 270 ಉಚಿತ ಆಸ್ಪತ್ರೆಗಳು ಆರಂಭ ಮಾಡಿದರು. ಬೆಂಗಳೂರಿನ ಮಿಂಟೋ ಕಣ್ಣಾಸ್ಪತ್ರೆ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿತ್ತು. ಮೈಸೂರಿನ ಕ್ರಿಷ್ಣರಾಜೇಂದ್ರ ಆಸ್ಪತ್ರೆ ಪ್ರಾರಂಭಗೊಂಡಿತು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮೈಸೂರು ಬ್ಯಾಂಕ್ ಮತ್ತು ಸಹಕಾರಿ ಕ್ಷೇತ್ರದೊಂದಿಗೆ ಆರಂಭ ಮಾಡಿತು. 1906 ರಲ್ಲಿಯೇ ಸಹಕಾರ ಸಂಘಗಳನ್ನು ಸ್ಥಾಪಿಸಲಾಯಿತು. ಕೈಗಾರಿಕಾ ವಲಯವನ್ನು ಒಡೆಯರ ಬೆಳವಣಿಗೆ ಆರಂಭಿಸಿದರು. ಮೈಸೂರು ಕೆಮಿಕಲ್ ಹಾಗೂ ಫರ್ಟಿಲೈಸರ್ ಕಾರ್ಖಾನೆ, ಭದ್ರಾವತಿ ಉಕ್ಕು & ಕಬ್ಬಿಣದ ಕಾರ್ಖಾನೆ, ಮೈಸೂರು ಬ್ಯಾಂಕ್, ಶ್ರೀಗಂಧ ಕಾರ್ಖಾನೆ, ಬಾಯ್ಸ್ ಸ್ಕೌಟ್ಸ್ ಸ್ಥಾಪನೆ, K.R. ಆಸ್ಪತ್ರೆ, ಬೆಂಗಳೂರ್ ಏರ್ ಕಿಯಾನಕ ಮೈಸೂರು ರೈಲ್ವೆ ಸ್ಥಾಪನೆ, ಭದ್ರಾವತಿ ಕಾಗದ ಕಾರ್ಖಾನೆ, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ, ಮೈಸೂರು ರೈಲ್ವೆ ಸ್ಥಾಪನೆ, ವೈದ್ಯಕೀಯ ಕಾಲೇಜು, ವಾಣಿವಿಲಾಸ ಮಹಿಳಾ ಹಾಗೂ ಮಕ್ಕಳ ಆಸ್ಪತ್ರೆ, ಗ್ಲಾಸ್ & ಪಿಂಗಾಣಿ ಕಾರ್ಖಾನೆ ಸ್ಥಾಪಿಸಿದರು.

"ಮೆಡಿಕಲ್ & ಆಸ್ಪತ್ರೆ"






### — ಮೈಸೂರು ಬ್ಯಾಂಕ್ —

ಮೈಸೂರು, ಬೆಂಗಳೂರು ಪ್ರಮುಖಗಳಂತಹ ನಗರಗಳಲ್ಲಿ ರಚಿತವಾದ ಭವ್ಯ ಕಟ್ಟಡಗಳು, ರಸ್ತೆಗಳು, ವಿದ್ಯುತ್ ದೀಪಗಳು, ಉದ್ಯಾನವನಗಳು, ಜಲ ಕಾರಂಜಿಗಳು, ವಿಶಾಲ ಮಾರ್ಗಗಳು, ವಿದ್ಯಾಸಂಸ್ಥೆಗಳು, ವಿದ್ಯಾರ್ಥಿ ನಿಲಯ ಅನಾಥಾಲಯಗಳು, ಛತ್ರಗಳು, ಕುಲಭೇದವಿಲ್ಲದೆ ಉತ್ತಮ ಸೇವೆ ನೀಡುತ್ತಿದ್ದ ಆಸ್ಪತ್ರೆಗಳು, ಕಣ್ಣಾಸ್ಪತ್ರೆಗಳು, ಸಂಚಾರಿ ವೈದ್ಯಶಾಲೆಗಳು, ಪ್ರಯಾಣ ತಂಗುದಾಣಗಳು ಮುಂತಾದ: ಇಷ್ಟು ಭವ್ಯ ಮಟ್ಟದಲ್ಲಿದ್ದುದು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ. ಈ ಸಂಸ್ಥಾನದಲ್ಲಿ ಕಲೆ, ಸಂಗೀತ, ಸಾಹಿತ್ಯ & ಸಂಸ್ಕೃತಿಗಳು ಪೋಷಣೆ ಪಡೆಯುತ್ತಿದ್ದವು.

Scanned with CamScanner

* ## ಸಾಮಾಜಿಕ ಸುಧಾರಣೆಗಳು

ಇವರು ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಸಾಮಾಜಿಕ ಸುಧಾರಣೆಗಳನ್ನು ಕೈಗೊಂಡರು. ಮಹತ್ವದ ಸಾಮಾಜಿಕ ಸುಧಾರಣಾ ಕಾನೂನುಗಳನ್ನು ಜಾರಿಗೊಳಿಸಿದರು. ಭಾರತದಲ್ಲಿ ಪ್ರಪ್ರಥಮವಾಗಿ ಮೈಸೂರು ರಾಜ್ಯದಲ್ಲಿ 1909ರಲ್ಲಿ ದೇವದಾಸಿ ಪದ್ಧತಿ ನಿಷೇಧ, 1910 ರಲ್ಲಿ ಬಸವಿ ಪದ್ಧತಿ ರದ್ದತಿ, 1910 ರಲ್ಲಿ "ಗೆಜ್ಜೆ ಪೂಜೆ" ಸಂಪ್ರದಾಯ ನಿಯಂತ್ರಣ, 1936 ಜುಲೈ 14 ರಂದು ಅಸ್ಪೃಶ್ಯರಿಗೆ ದೇವಾಲಯ ಪ್ರವೇಶ ಜಾರಿ 1936 ರಲ್ಲಿ ಪ್ರಥಮ ಬಾರಿಗೆ ದಲಿತರಿಗೆ ಅರಮನೆ ಪ್ರವೇಶ ಕಲ್ಪಿಸಿದರು. 1933 ಜೂನ್ 29 ರಂದು 'The Hindu Womens Rights" Act ನ್ನು ಜಾರಿಗೆ ತಂದು ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯನ್ನು ಹಕ್ಕು ನೀಡಿದರು.

1932 ರಲ್ಲಿ ಮೈಸೂರು ಮೆಟರ್ನಿಟಿ ಕಾಯ್ದೆಯನ್ನು ಜಾರಿಗೆ ತಂದು ಸ್ತ್ರೀ ಕಾರ್ಮಿಕರಿಗೆ 8 ವಾರಗಳ ಹೆರಿಗೆ ರಜೆ, ಜೊತೆ ಇತರ ಸೌಲಭ್ಯ ಒದಗಿಸಿದರು. 1922 ರಲ್ಲಿ ಬಾಲ ವಿಧವೆಗಳನ್ನು ಸ್ವಾವಲಂಬಿ ಸ್ತ್ರೀಯರು ಬಡ ಮಕ್ಕಳಿಗೆ ಮಾಸಿಕವಾಗಿ ಧನ ಸಹಾಯ ನೀಡಿದರು. 1938 ಮಾರ್ಚ್ 7 ಅಧಿಕವಾದ ಬಡ್ಡಿ ವಸೂಲಿ ಮಾಡುತ್ತಿದ್ದವರ ಕಾಯ್ದೆ ಜಾರಿ, 1914 ರಲ್ಲಿ ಶಾಲಾ ಪ್ರವೇಶಕ್ಕೆ ಜಾತಿ [illegible] ನಿಷೇಧ. 1927 ರಲ್ಲಿ ಸ್ತ್ರೀಯರಿಗೆ ಮತದಾನದ ಹಕ್ಕು, 1892 ರ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ದೇವದಾಸಿಯನ್ನು ನೇಮಿಸಿಕೊಳ್ಳುವ ಹಾಗೂ ಸ್ತ್ರೀಯರು ನೃತ್ಯ ಮಾಡುವ ಪದ್ಧತಿಯನ್ನು ನಿಷೇಧಿಸಿದರು. 1894 ರಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ. 1905 ರಲ್ಲಿ ಸಹಕಾರ ಸಂಘಗಳ ಕಾಯ್ದೆಯನ್ನು ಜಾರಿಗೆ ತಂದರು. 1913 ರಲ್ಲಿ ಮೈಸೂರು ಗ್ರಾಮ ನ್ಯಾಯಾಲಯ ಕಾಯ್ದೆಯನ್ನು ಜಾರಿಗೆ ತಂದರು. 1918 ರಲ್ಲಿ ಗ್ರಾಮ ಪಂಚಾಯಿತಿಗಳ ಕಾಯ್ದೆಯನ್ನು ಜಾರಿಗೆ ತರಲಾಯಿತು.

ರಾಜರು ಪ್ರಥಮ ಬಾರಿಗೆ ಸರ್ ಕಾಂತರಾಜ ಅರಸರನ್ನು ಬ್ರಾಹ್ಮಣೇತರರ ದಿವಾನರಾಗಿ ನೇಮಕ ಮಾಡಿದರು. ಇವರ ಕಾಲದಲ್ಲಿ ಮಿಲ್ಲರ್ ವರದಿ ಭಾರತದಲ್ಲಿ ಪ್ರಥಮ ಬಾರಿಗೆ ಹಿಂದುಳಿದ ವರ್ಗದವರಿಗೆ 70% ರಷ್ಟು ಮೀಸಲಾತಿ ನೀಡಿದರು. ಇದನ್ನು ವಿರೋಧಿಸಿ ಸರ್. ಎಂ. ವಿಶ್ವೇಶ್ವರಯ್ಯನವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವಾಗಿ ರೂಪಿಸಿದ ನಾಲ್ವಡಿಯವರನ್ನು ಮಧ್ಯಂತರ ಕೀರ್ತಿ ತಜ್ಞರು ಇತಿಹಾಸಕಾರರು "ಸಾಮಾಜಿಕ ಕಾನೂನುಗಳ ಹರಿಕಾರ" ಎಂದು ಕರೆದಿದ್ದು ಸೂಕ್ತವಾಗಿದೆ.

## * ನಾಲ್ವಡಿಯವರ ಕಾಲದ ಪ್ರಮುಖ ದಿವಾನರು :-

### ① ಸರ್ ಎಂ. ವಿಶ್ವೇಶ್ವರಯ್ಯ —



ಇವರು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ 1912 ರಲ್ಲಿ ದಿವಾನರಾದರು. 1912-18 ರವರೆಗೆ ಸೇವೆ ಸಲ್ಲಿಸಿದರು. ಇವರು ಮುದ್ದೇನಹಳ್ಳಿಯಲ್ಲಿ 1861 ರ ಸೆಪ್ಟೆಂಬರ್ 15 ರಂದು ಜನನ "ಆಧುನಿಕ ಮೈಸೂರಿನ ಶಿಲ್ಪಿ ನಿರ್ಮಾತೃ" ಎಂದು ಕರೆಯಲ್ಪಡುತ್ತದೆ. ಕೈಗಾರಿಕಾ ಅಭಿವೃದ್ಧಿಯಲ್ಲಿ "ಕೈಗಾರಿಕೀಕರಣ ಇಲ್ಲವೇ ವಿನಾಶ" ಎಂದು ಘೋಷಿಸಿದರು.

### ② ಸರ್ ಮಿರ್ಜಾ ಇಸ್ಮಾಯಿಲ್ —



ಇವರು ಒಬ್ಬರು ನಾಲ್ವಡಿ ಒಡೆಯರ ಕಾಲದ ಪ್ರಮುಖ ದಿವಾನರಾಗಿದ್ದರು. 1926-1941 ರವರೆಗೆ ಸೇವೆ ಸಲ್ಲಿಸಿದ್ದರು. ಇವರು "ಆಧುನಿಕ ಮೈಸೂರಿನ ನಿರ್ಮಾತೃರಲ್ಲೊಬ್ಬರು" ಎಂದು ಹೆಸರಾಗಿದೆ. [illegible] ಬೆಂಗಳೂರು & ಮೈಸೂರಿನಲ್ಲಿ ಅಲಂಕರಿಸಲಾಯಿತು. ಬೆಂಗಳೂರಿನಲ್ಲಿ (NIMHANS) ಸಂಸ್ಥೆ ಸ್ಥಾಪನೆ.

ಅನಂತರ ಮೈಸೂರು ಸಂಸ್ಥಾನಕ್ಕೆ ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ 1911ರಲ್ಲಿ ಮೈಸೂರು ಸಂಪದಭಿವೃದ್ಧಿ ಸಮಾಜ ಎಂಬ ಸಂಸ್ಥೆಯನ್ನು ಸ್ಥಾಪಿಸಲು ಮಹಾರಾಜರಿಗೆ ಸಲಹೆ ಕೊಟ್ಟಾಗ ಮಹಾರಾಜರು ಒಪ್ಪಿಕೊಂಡರು. ಇವರ ಸೂಚನೆಯಂತೆ ಈ ಸಂಸ್ಥೆಯು ಅಂಗವಾಗಿ 3 ಸಮಿತಿಗಳು ಮಾಡಲ್ಪಟ್ಟವು.

① ವಾಣಿಜ್ಯ ಕೈಗಾರಿಕಾ ಸಮಿತಿ.
② ಶಿಕ್ಷಣ ಸಮಿತಿ.
③ ಭೂ ವ್ಯವಸಾಯ ಸಮಿತಿ.

ಮಿತ್ರ ಸಮಾಜಕ್ಕೆ, H. V. ನಂಜುಂಡಯ್ಯನವರು ಅಧ್ಯಕ್ಷ-
ರಾಗಿ ಎ. ಸುಬ್ರಹ್ಮಣ್ಯ ಅಯ್ಯರ್ ಅವರು ಕಾರ್ಯದರ್ಶಿಗಳಾಗಿ
ನೇಮಕವಾದರು. ಈ ಮಿತ್ರ ಸಮಾಜವು ಮುಖ್ಯವಾಗಿ 2
ಕಾರ್ಯಗಳನ್ನು ನಿರ್ಧರಿಸಿದರು. ಅವುಗಳೆಂದರೆ.—

① ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆ.
② ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ.




"ಕನ್ನಡ ಸಾಹಿತ್ಯ ಪರಿಷತ್"-

ಹೀಗೆ ಪರಿಣಾಮಕಾರಿ ಅಭಿಪ್ರಾಯ ಕ್ರೋಢೀಕರಣ ಮಾಡಿದ್ದರಿಂದ
ನಿರ್ಮಾಣ ಮಾಡಿದ 1915 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು
ಅಸ್ತಿತ್ವಕ್ಕೆ ಬಂದಿತು.

## * ಸಮಾರೋಪ :—

ಹೀಗೆ ಇಂಥಹ ರಾಜರು ಮಾಡಿದ
ಆಡಳಿತದಲ್ಲಿ ಅಪಾರವಾದ ಹೀಗೂ ಅನೇಕ ಕೆಲವು ಕೆಲಸಗಳನ್ನು
ನಾಡಿನಲ್ಲಿದ್ದರು ಎಂದು ಹೇಳಬಹುದು. ನಾಡು ನುಡಿ ಸಂಸ್ಕೃತಿಯ
ಕ್ಷೇತ್ರ ಅಭಿವೃದ್ಧಿ, ಪ್ರಗತಿಯು, ಮೈಸೂರು ಸಂಸ್ಥಾನವು ಹೊಂದಿತ್ತು.
ದಿವಾನರು ಹಾಗೂ ಒಡೆಯರು ಆಳ್ವಿಕೆಯಲ್ಲಿ ಕೃಷ್ಣರಾಜ ಒಡೆಯರ್
ಅವರಿಂದ ಮೈಸೂರು ಇಲ್ಲಿಯ ಪ್ರಗತಿ ಸಾಧಿಸಿತು. ಜನರ ಹಿತದಿಂದ
ಹೀಗೆ ಎಂಬುದು ಈ ನಾಲ್ವಡಿಯವರ ಆಡಳಿತದ ಗೌರವವನ್ನು
ಎತ್ತಿತೋರಿಸುತ್ತದೆ. ಇವರು ಸಮರ್ಥ ರಾಜನೀತಿಯನ್ನು
ತಿಳಿದು ಆಳ್ವಿಕೆ, ವಿಶ್ವೇಶ್ವರಯ್ಯ, ಇಸ್ಮಾಯಿಲ್ ಅಂತಹ
ಸಮರ್ಥ ಆಡಳಿತಗಾರರನ್ನು ನೇಮಿಸಿ ನಾಡು ನಿರಂತರವಾಗಿ
ಬೆಳೆಸುತ್ತದೆ.

B.L.D.E. Association's

# S. B. Arts & K.C.P. Science College,
# VIJAYAPUR- 586 103.

# ASSIGNMENT

**For B.A./ B.Sc. ....II........ Semester**
**2022 - 2023**

Name of the Student Nitin R. Rathod.

Roll No. 189 R.C.U. Seat No. U15KM22A0190

Subject Cultural Heritage of Karnataka.

| Assignment No. | Date | Marks Assigned | Marks Obtained | Name and Signature of Teacher | Remarks |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| | | | | | |
| | | | | | |
| | | | | | |

Scanned with CamScanner

# ಕಲೆ ಮತ್ತು ವಾಸ್ತುಶಿಲ್ಪದ ಅರ್ಥ ಪ್ರಕಾರಗಳು ನೃತ್ಯದ

## ಪರಿವಿಡಿ


| ಕ್ರ.ಸಂ. | ವಿಷಯ | ಪು. ಸಂ. |
|---|---|---|
| 01. | ಪೀಠಿಕೆ | 01. |
| 02. | ಇಂಡೋ-ಇಸ್ಲಾಮಿಕ ವಾಸ್ತುಶಿಲ್ಪ | 02 |
| 03. | ಮೈಸೂರು ಅರಮನೆ | 03. |
| 04. | ವಿಜಯನಗರದ ವಾಸ್ತುಶಿಲ್ಪ | 04. |
| 05. | ನೃತ್ಯದ ಪ್ರಕಾರಗಳು.<br>i) ಯಕ್ಷಗಾನ<br>ii) ಬಯಲಾಟ | 05. |
| 06. | ಉಪಸಂಹಾರ | 07. |


Scanned with CamScanner

# ಕಲೆ ಮತ್ತು ವಾಸ್ತುಶಿಲ್ಪದ ಅರ್ಥ ಸ್ವರೂಪ ಪ್ರಕಾರಗಳು

## ಪೀಠಿಕೆ :-

ಕರ್ನಾಟಕದ ಭಾರತ ಪರಂಪರೆಯು ಬಹುಕಾಲ ದೇವಾಲಯ ಕಲೆ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳಿಂದ ಕೂಡಿದೆ. ವಾಸ್ತುಶಿಲ್ಪವು ದೇವಾಲಯ ಚೈತ್ಯಾಲಯ, ಬಸದಿ, ಗುರುದ್ವಾರ ಸ್ತೂಪ ಮಸೀದಿ ಚರ್ಚ್, ಅರಮನೆ ಮುಂತಾದವುಗಳಿಂದ ಕೂಡಿದೆ. ವಾಸ್ತುಶಿಲ್ಪ ಎಂದರೆ ಭಾರತದ ಕಟ್ಟಡಗಳು ಎಂದರ್ಥ. ಮೂರ್ತಿಶಿಲ್ಪವು ಶೈವ, ವೈಷ್ಣವ, ಗಾಣಪತ್ಯ ಬೌದ್ಧ ಜೈನ, ಆಧ್ಯಾತ್ಮಿಕ ಸಂಬಂಧ ದೇವಾನುದೇವತೆಗಳ ಹಾಗೂ ಶಿಲ್ಪಗಳ ಬಗ್ಗೆ ಮೂರ್ತಿಗಳು ಭಾರತದ ಇತರೆ ಅನೇಕ ಭಾಗಗಳ ಪರಂಪರೆಯೂ ಬೆಳೆದು ಬಂದಿದೆ ಕಲೆ ಮತ್ತು ವಾಸ್ತುಶಿಲ್ಪ ಇಂದು ಧರ್ಮಗಳು ಜನಾಂಗದ ಬದಲಾವಣೆಗಳ ಕೊಡುಗೆಯಾಗಿದೆ. ವೈವಿಧ್ಯಮಯವಾದ ಕಲೆ ಮತ್ತು ವಾಸ್ತುಶಿಲ್ಪ ಒಳಗೊಂಡಿರುವ ಭಾರತ ಪರಂಪರೆ ಕರ್ನಾಟಕದ ವೈಶಿಷ್ಟ್ಯವಾಗಿದೆ. ಈ ಪರಂಪರೆಯು ಇತರರ ಬೇರೆ ಪ್ರಕಾರವಾಗಿದ್ದು ಇದರ ಐತಿಹಾಸಿಕ ಬೆಳವಣಿಗೆಯನ್ನು ಕಂಡುಬರುತ್ತದೆ.

ಮಧ್ಯಕಾಲದ ಕಲೆ ವಾಸ್ತುಶಿಲ್ಪ ಪರಂಪರೆ ಮುಂತಾದ ಶೈಲಿ ಪ್ರಕಾರಗಳು ಬೆಳೆದುಬಂದಿದೆ. ಧರ್ಮ ರಾಜಮನೆತನಗಳ ಆಶ್ರಯ ಶೈಲಿ, ಕಾಲಮಾನ ಮುಂತಾದ ವಿಶಿಷ್ಟತೆಯನ್ನು ಹೊಂದಿರುವುದಾಗಿದೆ. ಐತಿಹಾಸಿಕ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಸಂಕ್ಷಿಪ್ತ ಪರಿಚಯ ನೀಡಲಾಗಿದೆ. ಕಲೆ ಮತ್ತು ವಾಸ್ತುಶಿಲ್ಪ ಪ್ರಯೋಗವು ಕರ್ನಾಟಕದ ಒಂದು ಪ್ರಯೋಗಶಾಲೆ ಎಂದು ಕರೆಯುವರು. ಕದಂಬರ ಶೈಲಿ ಚಾಲುಕ್ಯರ, ಗಂಗರ, ಹೊಯ್ಸಳರ, ವಿಜಯನಗರದ ಹಾಗೂ ಮೈಸೂರಿನ ಪ್ರಾದೇಶಿಕ ವಿಶಿಷ್ಟ ಶೈಲಿಯ ಪ್ರಯೋಗಗಳ ಬೆಳವಣಿಗೆಯನ್ನು ಕಾಣಬಹುದು.

# ಇಂಡೋ - ಇಸ್ಲಾಮಿಕ್ ವಾಸ್ತುಶಿಲ್ಪ :-



ಗೋಲ್ ಗುಂಬಜ್ ಆದಿಲ್ ಶಾಹಿ ರಾಜವಂಶದಿಂದ ನಿರ್ಮಿತವಾದ ಅತ್ಯಂತ ಮಹತ್ವ ಸಂಕೀರ್ಣ ರಚನೆಗಳಲ್ಲಿ ಒಂದಾಗಿದೆ. ಇದು ಜಗತ್ತಿನಲ್ಲಿ ನಿರ್ಮಿಸಲಾದ ಅತ್ಯಂತ ತಾಂತ್ರಿಕವಾಗಿ ಮುಂದುವರಿದ ಗುಮ್ಮಟದ ರಚನೆಯಾಗಿದೆ.

ರಚನೆಯ ಗೋಡೆಗಳನ್ನು ಗಾಢ ಬೂದು ಬಸಾಲ್ಟ್ ಮತ್ತು ಅಲಂಕೃತ ಪ್ಲಾಸ್ಟರ್‌ನಿಂದ ನಿರ್ಮಿಸಲಾಗಿದೆ. ಘನದ ಪ್ರತಿ ಬದಿಯ ಗೋಡೆಗಳು ಮೂರು ಕಮಾನುಗಳನ್ನು ಹೊಂದಿವೆ. ಕಮಾನುಗಳ ಸ್ಪ್ಯಾಂಡ್ರೆಲ್‌ಗಳಲ್ಲಿ ಮೆಡಾಲಿಯನ್ ಪದಕಗಳನ್ನು ಅಳವಡಿಸಲಾಗಿದೆ ಮತ್ತು ಪ್ರತಿ ಬದಿಯ ಗೋಡೆಯು ಮೇಲಿನ ಕೇಂದ್ರ ಕಮಾನು ದ್ವಾರಗಳು ಮತ್ತು ಕಿಟಕಿಗಳನ್ನು ಹೊಂದಿರುವ ಕಲ್ಲಿನ ಪರದೆಯಿಂದ ತುಂಬಿರುತ್ತದೆ. ರಚಿಸಲ್ಪಟ್ಟ ಕೆಳಗಿನ ಪ್ರೊಜೆಕ್ಟಿಂಗ್ ಗ್ಯಾಲರಿ ಇದೆ.

# ಮೈಸೂರು ಅರಮನೆ



ಮೈಸೂರು ಅರಮನೆಯು ನಗರದ ಒಂದು ಪ್ರಸಿದ್ಧವಾದದ್ದು. ಅರಮನೆ ಅದ್ಭುತವಾದ ಪ್ರವಾಸಿತಾಣ ದಸರಾ ಉತ್ಸವ ಸಂದರ್ಭದಲ್ಲಿ ಬಹಳ ಸುಂದರವಾಗಿದೆ. ಮೈಸೂರು ಅರಮನೆಯು ಜಗತ್ಪ್ರಸಿದ್ಧವಾಗಿದೆ. ಅಂಬಾವಿಲಾಸ ಅರಮನೆ, ಚೆಲುವಾಂಬ ವಿಲಾಸ, ಜಯಲಕ್ಷ್ಮಿ ವಿಲಾಸ. ಜಗನ್ಮೋಹನ ಅರಮನೆಯು (1861) ನಿರ್ಮಾಣವಾದರೆ ಪ್ರಾಚೀನ ವೈಭವದ ರಾಜೇಂದ್ರ ವಿಲಾಸ ಕಾರಂಜಿ ವಿಲಾಸ.

ಮೈಸೂರು ನಗರದಲ್ಲಿ ಅರಮನೆಯ ನಿರ್ಮಾಣ ಪ್ರಾರಂಭಿಸಿದ್ದು ಯದುರಾಯ (1399-1423) ಅರಸರು. ಮರದ ಒಂದು ರಚನಾತ್ಮಕ ಕೋಟೆಯ ಒಳಗೆ ಕಟ್ಟಿದ ಮತ್ತು ಪ್ರಾಂಗಣದಲ್ಲಿ ನಿರ್ಮಾಣಗೊಂಡಿರುವ ಇಂಡೋ-ಸಾರಸೆನಿಕ್ ಶೈಲಿಯಲ್ಲಿದೆ.

1930 ರಲ್ಲಿ ಸಿಂಹಾಸನಾರೋಹಣದ ಸಮಯದಲ್ಲಿ ನವೀಕರಿಸಲಾಯಿತು.

## ವಿಜಯನಗರ ( ವಾಸ್ತುಶಿಲ್ಪ



ವಿಜಯನಗರ ಸಾಮ್ರಾಜ್ಯದಾದ್ಯಂತ ಹಲವಾರು ಗುಡಿಗಳನ್ನು ನಿರ್ಮಿಸಿದ ದೇವಾಲಯಗಳನ್ನು ಸ್ತಂಭಸಾಲು-ಲೆ ಮತ್ತು ಅವುಗಳ ಪ್ರವೇಶದ್ವಾರಗಳನ್ನು ಗಾಢ ಗೋಪುರಗಳು ಎಂದು ಕರೆಯಲ್ಪಡುವ ಪ್ರವೇಶದ್ವಾರದ ದ್ವಾರಗಳಿಂದ ಅಲಂಕರಿಸಲ್ಪಟ್ಟಿವೆ. ಈ ದ್ವಾರಗಳು ಸಂಕೀರ್ಣ-ವಾದ ಕೆತ್ತನೆಗಳನ್ನು ಒಳಗೊಂಡಿದ್ದು ಅವುಗಳ ಮೇಲ್ಭಾ-ಗವನ್ನು ಕಮಾನುಗಳಾಗಿ ಅಲಂಕರಿಸಿದೆ.

ವಿಜಯನಗರದ ವಾಸ್ತುಶಿಲ್ಪವು ಹಿಂದಿನ ದ್ರಾವಿಡ ಶೈಲಿಯ ಅಂಶಗಳನ್ನು ಒಳಗೊಂಡಿದೆ. ಅದೇ ಅದೇ ಸಮಯದಲ್ಲಿ ಇದು ತನ್ನ ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ. ಇದು 'ದ್ರಾವಿಡ ಶೈಲಿ' ಎಂಬ ಹೊಸ ಶೈಲಿಗೆ ಜನ್ಮ ನೀಡಿತು.

ಇವರು ವಿಜಯನಗರ ಸಾಮ್ರಾಜ್ಯದ ಹಿರಿಯ ನಾಯಕರಿಂದ ಪ್ರಭಾವಿತರಾಗಿದ್ದರು. ಅವರ ಪ್ರಖ್ಯಾತ ಗೋಪುರ ನಿರ್ಮಾಣವು ಅವರ ಶ್ರೇಷ್ಠತೆಯನ್ನು ತೋರಿಸಿತು.

Scanned with CamScanner

# ನೃತ್ಯದ ಪ್ರಕಾರಗಳು :-

## ಯಕ್ಷಗಾನ :-



ಕರ್ನಾಟಕದ ತುಳುನಾಡು ಕರಾವಳಿಯ ಮಂಗಳೂರು, ಉಡುಪಿ, ಉತ್ತರಕನ್ನಡ ಜಿಲ್ಲೆಗಳಲ್ಲಿ ಜನಪ್ರಿಯವಾದ ಯಕ್ಷಗಾನ ಪ್ರದರ್ಶನ ಕಲೆಯು ಪ್ರಾಚೀನ ಗ್ರಂಥಗಳಿಂದ ಕೂಡಿದ ನೃತ್ಯ ಹಾಡು, ಸಂಭಾಷಣೆ, ಅದ್ಭುತ ವೇಷಭೂಷಣಗಳಿಂದ ಕೂಡಿರುವ ಭಾರತದ ಸಾಂಪ್ರದಾಯಿಕ ಶಾಸ್ತ್ರೀಯ ನೃತ್ಯನಾಟಕ ಪ್ರಕಾರಗಳಲ್ಲಿ ಒಂದಾಗಿದೆ. ಯಕ್ಷಗಾನ, ಬಯಲಾಟ ಪ್ರಸಂಗ, ಬಯಲಾಟ ಆಟ ಎಂದು ಕರೆಯಲಾಗುವ ಈ ನೃತ್ಯ ನಾಟ್ಯ ಕಲೆಯಲ್ಲಿ ಮೂಡಲಪಾಯ, ಪಡುವಲಪಾಯ ಎಂಬ ಮುಖ್ಯ ಎರಡು ಪ್ರಕಾರಗಳು ತೆಂಕುತಿಟ್ಟು, ಬಡಗು ತಿಟ್ಟು, ಬಡಾಬಡಗುತಿಟ್ಟು ಎಂಬ ಉಪಪ್ರಕಾರಗಳಿವೆ.

ಯಕ್ಷಗಾನದ ಐತಿಹಾಸಿಕ ಪರಂಪರೆ ಅಪ್ರತಿಮವಾಗಿದೆ. ಪ್ರಾಚೀನ ಕಾಲದ ಗಾನ, ಸಂಪ್ರದಾಯ, ಆಂಗಿಕ ಅಭಿನಯ, ಬಣ್ಣ, ಮಾತುಗಾರಿಕೆ, ಭಾಗವತಿಕೆ ಯಕ್ಷಗಾನ ಕಲಾ ಅಂಶಗಳು ಸಂಯೋಜನೆಗೊಂಡು ಯಕ್ಷಗಾನ ಪ್ರಕಾರವಾಗಿ ರೂಪುಗೊಂಡಿರುವ ಹಲವಾರು ಕಥೆಗಳನ್ನು ಇಲ್ಲಿ ಹೊಂದಿದೆ. ಇದೊಂದು ಸಂಗೀತ ಸಾಹಿತ್ಯ, ನಾಟ್ಯ, ನೃತ್ಯ ನಾಟಕಗಳ ಮಿಶ್ರಣ ಹೊಂದಿದ ಪ್ರದರ್ಶನ ಕಲೆಯಾಗಿದೆ. ಈ ಕಲೆಯು ಪ್ರದರ್ಶನ ಕೆಲವೊಮ್ಮೆ ಪ್ರಸಂಗ ಎಂದು ಕರೆಯಲಾಗುತ್ತದೆ.

Scanned with CamScanner

# ಯಕ್ಷಗಾನ - 1



ಯಕ್ಷಗಾನ ಶಾಸ್ತ್ರೀಯ ನೃತ್ಯದ ಪ್ರಾಗಂತ ಕರ್ನಾಟಕದ ಒಂದು ಜಾನಪದ ಕಲೆ. ಇದು ಸಂಪ್ರದಾಯದ ನಾಟಕ ಹಾಗೂ ನೃತ್ಯ. ನೃತ್ಯದ ನಡುವೆ ಕಥೆಯ ಬರದ ಹಿನ ಕಲಾವಿದರುಗಳು ಕೇಳಿ ಒಂದು ಹೇಳುವ ಸಂವಾದ ನಡೆಸಿಕೊಡುತ್ತಾರೆ. ರಾಜ್ಯದ ಮೂಲೆಮೂಲೆ ಇದರಲ್ಲಿ ಭಾಗವಹಿಸುವರು. ಚಿಕ್ಕಮಗಳೂರು, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ ಧಾರವಾಡ ಜಿಲ್ಲೆಗಳಲ್ಲಿ ಈ ನೃತ್ಯ ಪ್ರದರ್ಶನ ಬಹಳ ಪ್ರಸಿದ್ಧ. ರಂಗ ಭೂಮಿಯ ಮೇಲೆ ತೆರೆಯುತ್ತಾ ಈ ವಾದ್ಯಗಳು ಇಲ್ಲಿ ಬಳಸಲಾಗು ತ್ತವೆ. ತೆರೆದ ಸ್ಥಳದಲ್ಲಿ ಬಯಲಾಟ ಮಾಡ್ಯ ಬಳಸಿದೆ.

ಸಾಮಾನ್ಯವಾಗಿ ಜಾತ್ರೆ, ದೇವರ ಮೆರವಣಿಗೆ, ಹಬ್ಬ, ಉತ್ಸವ, ಮದುವೆ, ನೃತ್ಯ ಪ್ರದರ್ಶನ ಮೊದಲಾದ ಸಂದರ್ಭಗಳಲ್ಲಿ ಯಕ್ಷಗಾನ ನಡೆಯುತ್ತದೆ. ಯಕ್ಷರುಗಳ ಯಕ್ಷಪ್ರಶ್ನೆ ಮಾಡಿ ಮೊದಲಾದ ಸಂಬಂಧವಿರುವ ಯಕ್ಷಗಾನ ಬಗ್ಗೆ ಬರೆಯಲಾಗಿದೆ. ಯಕ್ಷಗಾನವನ್ನು 'ಬಯಲಾಟ' ಎಂದು ಕರೆಯಲಾಗುತ್ತದೆ. ಇದು ಒಂದು ಅಲಂಕಾರ ಪ್ರಮುಖ ಹೊಂದಿರುವ ಉಡುಗೆಯನ್ನು ಧರಿಸುತ್ತಾರೆ.

## ಉಪಸಂಹಾರ :-

ಕರ್ನಾಟಕದ ಐತಿಹಾಸಿಕ ಪರಂಪರೆಯು ಅದ್ಭುತವಾದ ದೇವಾಲಯ, ಕಲೆ ವಾಸ್ತು ಶಿಲ್ಪ ಕಲೆಗೆ ಮಾದರಿಗಳಿಂದ ಕೂಡಿದೆ. ಕರ್ನಾಟಕದೆಲ್ಲ ವಾಸ್ತು ಮತ್ತು ಶಿಲ್ಪಕಲಾ ಪ್ರಪಂ ಇತಿಹಾಸಕಾರರಿಂದ ಮುಂದುವರೆದು ಕೊಂಡು ಬಂದಿದೆ. ಉದಾಹರಣೆಗಾಗಿ ನೋಡುವ ಅಂದರೆ ಬಾದಾಮಿಯ ಗುಹಾಂತರಗಳು ಇದು ಒಂದು ಇತಿಹಾಸಿಕ ಸಾಕ್ಷಿಯನ್ನು ಹೊಂದುಕೊಂಡಿದೆ. ಮೈಸೂರಿನ ಅರಮನೆಗಳು, ಮತ್ತು ಬಿಜಯಾನಗರದ ವಾಸ್ತು ಶಿಲ್ಪಕಲೆಯನ್ನು ಹೊಂದಿದೆ. ಕರ್ನಾಟಕದ ಪ್ರತ್ಯೇಕ ಒಂದು ಸಾಂಸ್ಕೃತಿಕ ಸಾಕ್ಷಿಯನ್ನು ಹೊಂದಿದೆ

B.L.D.E. Association's

# S. B. Arts & K.C.P. Science College, VIJAYAPUR- 586 103.

# ASSIGNMENT

For B.A./ ~~B.Sc.~~ B.A. 4th Semester

2022 - 2023

Name of the Student: Smrithi Habbu

Roll No.: 49 R.C.U. Seat No.: U15KM21A0051

Subject: History [Cultural History of India] DSC - 8

| Assignment No. | Date | Marks Assigned | Marks Obtained | Name and Signature of Teacher | Remarks |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| | | | | | |
| | | | | | |
| | | | | | |

Scanned with CamScanner

# Pre - Vedic And Later Vedic Period Society and Religion.

Under the guidance of
Prof. Girish Reddy Sir



Scanned with CamScanner

# Index


| Sl.No | Title | Page no |
|---|---|---|
| 01 | Pre Vedic Society and religion. | 05 - 11 |
| 02 | Later Vedic Society and religion | 13 - 15 |




Scanned with CamScanner

# Pre-Vedic Society and Religion

## Introduction

The Vedic Period or the Vedic age [c.1500 - c.500BCE] is a period in the late Bronze Age and early Iron Age of the History of India when the Vedic literature, including the Vedas, was composed in the northern Indian Sub continent between the end of the urban Indus Valley Civilization and the Second urbanization which began in the Central Indo - Gangetic Plain c. 600 BCE.

The Vedas are influencial texts which formed the basis of the influential Brahmanical ideology which developed in the kuru kingdom a tribal union of several Indo-Aryan tribes.

The documents alongside the corresponding archaeological record allow for the evolution of the Indo-Aryan and vedic culture to be traced and inferred.

The Vedas were composed and orally transmitted with precision by speaker of an old-Indo-Aryan language who had migrated into the north western regions of the Indian sub-continent early in this period

The vedic religions saw the emergence of hierarchy of social classes that would remain influential



Scanned with CamScanner

# Early / Pre Vedic Period

The early or the pre vedic period is also known as the Rig Vedic Period. the Indo Aryans believed mostly in Pastoral activities limited agriculture with a smaller economy. They raised cattle sheep and goats, which became the symbols of abundance or wealth.

Primarily the Aryans lived in a region or land known as 'Sapta Sindhu' or "the land of the seven rivers". The land of seven rivers includes seven rivers which are Beas Sindhu Jhelum, Satluj, chenab, Ravi and 'saraswati'.

The Aryans were primarily restricted to the Indus region throughout the Rig Vedic era.

~~Sapta~~ The Rigvedic Period is also known as the Early Vedic period, is the first stage

- The Production of the Rigvedic hymns related to the age of Early Vedic era. This date is estimated to be between 1500 and 1000 BC.

# Political Organization

- The kula, or family, was the main unit of political structure
- Several family came together to establish a community, or grama, based on their kingship.



Scanned with CamScanner

- Grama's chieftain was known as gramini, Visa was the highest political unit made of many settlements.
- Vishyapati was in charge, Jana and tribe was the highest political unit.
- During the Rig Vedic period there were various tribal kingdoms such as Bharatas Matsyas Yadus and Purus.
- The Rajan or king was the ruler of the country. The society was monarchic.
- Samitis and Sabha were two ~~political~~ popular bodies.
- The society of the Rigvedic was Patriarchal. Grahani was the main unit of the society. the family head was known grahapati
- The woman was in charge of household, women offered same spiritual and intellectual growth chances as males.
- Women poets were Apala, Vishwara, Gargi, Lopamudra existed.
- There were no child marriages and Sati was not practised.
- Cotton and woollen upper and lower garments were worn by both male & female.
- Ornaments were worn and wheat and barley milk and its derivatives such as curd and ghee vegetables and fruits were mainly produced
- Meat was forbidden. the most popular hobbies were chariot racing, horse racing etc. music, dancing
- During the Rig Vedic period, social divides were less strict than they were in later in Vedic period.



Scanned with CamScanner

# Religion

- The Rig vedic Aryans were pastoral people who raised cattle as their major source of income.
- Earth, fire, wind, rain and thunder were all revered by the Rig vedic Aryans.
- They made gods out of these natural forces and worshipped them.
- Prithvi Agni Vayu Varuna and Indra were significant Rig vedic gods.
- During the early vedic period Indra was the most popular of them all.
- Following Indra in significance was Agni who was seen as a link between the Gods and the humans.
- Varuna was intended to keep the natural order in place. Aditi and Ushas, for examples were female gods
- During the early vedic period there were no temples or idol worship.
- The Gods were prayed to in the hopes of receiving benefits. offerings included ghee, milk and grain.

The Rigveda is one of their oldest writings and there were many more of that.



Scanned with CamScanner

# Later Vedic Period

The later vedic age is an important part of ancient Indian History.
The Aryans further moved towards the east in the later vedic period.
Kuru and Panchala kingdoms flourished in the beginning. Parikshit and Janamejaya were the famous rulers of Kuru kingdom.

## Social life

The later Vedic society was divided into four Varnas called the Brahmanas, Rajanyas, Vaishyas and Sudras.
The growing cult of sacrifices greatly added to the Brahmanas power.

- All the three higher varnas had a common feature they were entitled to Upanayana.
- In the family a patrimonial system developed and women were generally given a lower rank.
- Daughter has been described as a source of misery.
- The institution of gotra appeared in later Vedic age. No marriage could be taken place with same gotra.
- Gotras are named after legendry seers Kashyapa, Bharadwaja, Gautama, Bhrigu.
- Ashramas were Brahmachari, Grihastha, Vanaprastha and Sanyasa.
- Certain craft groups like Rathakaras enjoyed a special status and had right to wear the sacred thread.



Scanned with CamScanner

# Religion

- The two outstanding Gods were Indra, Agni lost their former importance. On the other hand, Prajapati came to occupy the supreme position in the later vedic age. Some of the other minor gods of the Rigvedic period also became prominent such as rudra and vishnu
- Some of the social orders came to have their own deities - Pushan God of sudras
- The cult of sacrifices was the cornerstone of their culture and was the accompanied by numerous rituals and formulae,
- Both sacrifices involved the kings and the whole community. while Private sacrifices were performed by individuals in their house
- The sacrificer was known as Yajamana the performer of yajna. were Ashvemedha, Vajapeya, Rajasuya.
- The Brahmanas claimed a monopoly of priestly knowledge and expertise. They were rewarded generously for officiating the sacrifices.
- Dakshinas in the form of cows, gold, colth and also horses were given

Sometimes the priests claimed portion of territory as Dakshina

Towards the end of the later vedic age a strong reaction began to emerge against the priestly domination against cults and rituals especially in the land of Panchalas and Videha were around upanishadas.



Scanned with CamScanner

# Conclusion

After the fall of Harappan civilization a new type of people appears on India's northern horizon. The Rigvedic is one of their earliest works and there were many more after that. Throughout the later Vedic Period, the Aryans pushed eastward.
All the agriculture was started in the Vedic religion

Scanned with CamScanner

B.L.D.E. Association's

# S. B. Arts & K.C.P. Science College, VIJAYAPUR- 586 103.

# ASSIGNMENT

For B.A./ ~~B.Sc.~~ ....VI...... Semester
2022 - 2023

Name of the Student Shruti . I Ghantenavar

Roll No. 13 R.C.U. Seat No. A2051886

Subject History of Modern India

| Assignment No. | Date | Marks Assigned | Marks Obtained | Name and Signature of Teacher | Remarks |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| | | | | | |
| | | | | | |
| | | | | | |
| | | | | | |

Scanned with CamScanner

ಕಾವೇರಿಯ ಸಂಸ್ಕಾರಿಣಿಯಲ್ಲ

ರಚನೆ ಕಾವ್ಯ :

# ಪರಿವಿಡಿ


| ಕ್ರ.ಸಂ | ಉಪಕರಣಗಳು | ಪು.ಸಂ |
|---|---|---|
| 1) | ಪೀಠಿಕೆ | 1 |
| 2) | ರಾಜಾರಾಮಮೋಹನ ರಾಯ್ | 2 |
| | a) ಆರಂಭಿಕ ಜೀವನ | |
| | b) ಶಿಕ್ಷಣ | |
| | c) ಪತ್ರಿಕೆಗಳು | |
| 3) | ರಾಜಾರಾಮಮೋಹನ ರಾಯರ ತತ್ವಗಳು | 4 |
| 4) | ಸಾಮಾಜಿಕ ಸುಧಾರಣೆಗಳು | 5 |
| | a) ಸತಿಸಹಗಮನ ಪದ್ಧತಿ | |
| | b) ವಿಧವಾ ಪುನರ್ ವಿವಾಹ | |
| | c) ಶಿಕ್ಷಣ, ಪಾಶ್ಚಾತ್ಯ | |
| 5) | ಉಪಸಂಹಾರ | 6 |


Guide by - Prof.
G. S. Reddy sir.

## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು :-

I. **ಪೀಠಿಕೆ :-**

18 ನೇ ಶತಮಾನದ ಕೊನೆಯ ಭಾಗದಲ್ಲಿ ಆಧುನಿಕ ಹೊಂದುತ್ತಿದ್ದ ಸಮಾಜಕ್ಕೆ ಹೊಸ ದಿಕ್ಕನ್ನು ನೀಡುವ ವ್ಯಕ್ತಿಯುಂದ ಪ್ರಾಚೀನ ಭಾರತೀಯ ಪರಂಪರೆಯನ್ನು ಅನುಸರಿಸಿ. ಅದ್ವೈತ ವೇದಾಂತದಲ್ಲಿ ಅಡಕವಾಗಿರುವ ಏಕತೆಯ ತತ್ವವನ್ನು ಮತ್ತೆ ಎಲ್ಲರಿಗೂ ನಿರ್ಭೀತ್ಯವಾಗಿ ತಿಳಿಯುವ ಮತ್ತೆ ಬರಸಿದ್ದ ಶಿಗಾರ ಕೆಟ್ಟಕೆಯನ್ನು ತಪ್ಪಿಸಲು ಬ್ರಹ್ಮಸಮಾಜ ಎಂಬ ಸಂಸ್ಥೆಯನ್ನು ರಾಜಾರಾಮಮೋಹನರಾಯರು 1828ರಲ್ಲಿ ಸ್ಥಾಪಿಸಿದರು.

II. **ರಾಜಾರಾಂ ಮೋಹನರಾಯರು :-**

**ಆರಂಭಿಕ ಜೀವನ :-**

1772ರ ಮೇ 22 ರಂದು ಬಂಗಾಳದ ರಾಧಾನಗರ ಎಂಬ ಹಳ್ಳಿಯ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ರಾಯ್ ಎಂಬುದು ಅವರ ಮನೆತನದ ಹೆಸರಾಗಿತ್ತು. ಪಾಟ್ನಾ & ವಾರಣಾಸಿಯಲ್ಲಿ ವ್ಯಾಸಂಗವನ್ನು ಮುಗಿಸಿ ನಂತರ ಈಸ್ಟ್ ಇಂಡಿಯಾ ಕಂಪನಿಯಲ್ಲಿ 1803 ರಿಂದ 1814 ರವರೆಗೆ ಸೇವೆ ಸಲ್ಲಿಸಿದರು.

**ಶಿಕ್ಷಣ :-**

ಪ್ರಾಥಮಿಕ ಶಿಕ್ಷಣದಲ್ಲಿ ಆಸಕ್ತಿ ಹೊಂದಿದ್ದ ರಾಜಾರಾಂ ಮೋಹನರಾಯರು ಇಂಗ್ಲೀಷ್, ಅರೇಬಿಕ್, ಪರ್ಷಿಯನ್, ಸಂಸ್ಕೃತ, ಬಂಗಾಳಿ, ಗ್ರೀಕ್, ಹೀಬ್ರೂ ಮುಂತಾದ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದರು. 1803ರಲ್ಲಿ ಪರ್ಷಿಯನ್ 'ತುಹಫತ್-ಉಲ್-ಮುವಾಹಿದಿನ್" (ಏಕದೇವತೆಗಳಿಗೆ ಒಂದು ಕಾಣಿಕೆ) ಎಂಬ ಪ್ರಬಂಧವನ್ನು ಬರೆಯುವುದಲ್ಲದೇ ಸಣ್ಣ-ಸಣ್ಣ ಹಲವಾರು ಲೇಖನಗಳನ್ನು ಪರ್ಷಿಯನ್ ಭಾಷೆಯಲ್ಲಿ ಬರೆದರು.

ಪತ್ರಿಕೆಗಳು :-

"ಸಂವಾದ ಕೌಮುದಿ' ಎಂಬ ಬಂಗಾಳಿ ಪತ್ರಿಕೆಯನ್ನು ಹೊರಡಿಸಿ. ನಂತರ ಇಂಗ್ಲೀಷ್, ಪರ್ಷಿಯನ್ ಪತ್ರಿಕೆಗಳನ್ನು ಪ್ರಾರಂಭಿಸಿ ಜನಸಾಮಾನ್ಯರಲ್ಲಿ ಜ್ಞಾನ ಪ್ರಸಾರ ಮಾಡಿ ಜಾಗೃತಿಯನ್ನು ಬೆಳೆಸಲು ಪ್ರಯತ್ನಿಸಿದರು. 1828 ರಲ್ಲಿ 'ಬ್ರಹ್ಮ ಸಮಾಜ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದನ್ನು ಒಂದು ಟ್ರಸ್ಟ್ ಮಂಡಳಿಗೆ ವಹಿಸಿ 1830 ರ ಜನವರಿ 8 ರಂದು ಬರೆದು ಕೊಟ್ಟ ನಾನು ಪತ್ರದಲ್ಲಿ ಈ ಕಟ್ಟಡವನ್ನು "ಭೇದ ಭಾವವಿಲ್ಲದೇ ಎಲ್ಲ ವರ್ಗಗಳ ಜನರು ದೇವರ ಆರಾಧನೆ ನಡೆಸಲು ಸಭಾಗೃಹವನ್ನಾಗಿ ಬಳಸಲು & ಅದಕ್ಕಾಗಿಯೇ ಮೀಸಲಿಡಬೇಕೆಂದೂ. ಅಲ್ಲಿ ಯಾವ ಪ್ರತಿಮೆಯನ್ನಾಗಲೀ ಇಡಕೂಡದೆಂದೂ. ಸಂಸ್ಕಾರಗಳು ನಡೆಯಕೂಡದೆಂದು ನಿರ್ಬಂಧಿಸಿದ್ದರು."

ಬ್ರಹ್ಮ ಸಮಾಜದ ತತ್ವಗಳು :-

1) ರಾಜಾ ರಾಮ ಮೋಹನರಾಯರವರ ಬ್ರಹ್ಮ ಸಮಾಜವು ಹಲವು ಧರ್ಮಗಳ ಸಾರ ತತ್ವಗಳನ್ನೊಳಗೊಂಡಿತ್ತು.

2) ದೇವರು ಒಬ್ಬನೇ, ವಿಗ್ರಹಾರಾಧನೆಗೆ ವಿರೋಧ, ಮೂಢನಂಬಿಕೆ, ಕಂದಾಚಾರ, ಅಂಧಾನುಕರಣೆಗೆ ವಿರೋಧ, ಜಾತಿ - ವರ್ಗಗಳ ವಿರೋಧ, ವಿಧವಾ ವಿವಾಹಕ್ಕೆ ಪ್ರೋತ್ಸಾಹ, ಬಾಲ್ಯ ವಿವಾಹ ವಿರೋಧ, ಸ್ತ್ರೀಯರಿಗೆ ಸಮಾನ ಸ್ವಾತಂತ್ರ್ಯ, ಸತಿ ಸಹಗಮನ ಪದ್ಧತಿಗೆ ವಿರೋಧ ಮೊದಲಾದ ತತ್ವಗಳನ್ನೊಳಗೊಂಡಿತ್ತು.

3) ಒಂದೇ ಧರ್ಮವನ್ನು ಕಟ್ಟರತವಾಗಿ ಆರಾಧಿಸುವ ಈ ವ್ಯವಸ್ಥೆಯು ಬ್ರಹ್ಮ ಸಮಾಜದ ಬುನಾದಿಯಾಗಿತ್ತು.

4) ರಾಜಾರಾಮ್ ಮೋಹನರಾಯರು ಜಾತಿ ವರ್ಗ ಭೇದವನ್ನು ತೊಡೆದು ಹಾಕಲು ಪ್ರಯತ್ನಿಸಿದರು.

5) ಜಾತಿ ಪದ್ಧತಿಯಿಂದ ಹೀನಕ್ಕೆ ಒಳಗಾದ ಮಂಗಳ ವ್ಯಾಧಿ ಈ ಪದ್ಧತಿ ಜನರನ್ನು ಶತ್ರುತ್ವದ ಭಾವನೆಯಿಂದ ದೂರಮಾಡಿತು.

## ರಾಜಾರಾಮಮೋಹನರಾಯರವರ ಸಾಮಾಜಿಕ ಸುಧಾರಣೆಗಳು :-

1) **ಸತಿಸಹಗಮನ ಪದ್ಧತಿ :-**

1822 ರಲ್ಲಿ ಸ್ತ್ರೀಯರಿಗೆ ಸಂಬಂಧಿಸಿದಂತೆ ಪ್ರಬಂಧವನ್ನು ಪ್ರಕಟಿಸಿ, ಸ್ತ್ರೀಯರ ಮೇಲೆ ನಡೆಯುತ್ತಿದ್ದ ದೌರ್ಜನ್ಯ, ಹಕ್ಕುದಾರಿಕೆಯಿಲ್ಲದಿರುವುದು, ಎಲ್ಲಕ್ಕಿಂತ ಹೆಚ್ಚಾಗಿ ಸತಿಸಹಗಮನ ಪದ್ಧತಿಯ ವಿರುದ್ಧ ಉಗ್ರ ಲೇಖನಗಳನ್ನು ಪ್ರಕಟಿಸಿ ಅದರ ವಿರುದ್ಧ ಹೋರಾಟವನ್ನು ಆರಂಭಿಸಿ ಭಾರತದ ಬ್ರಿಟಿಷ್ ಸರ್ಕಾರಕ್ಕೆ ಮನವಿ ಅರ್ಪಿಸಿದರು.

ಈ ಸಮಯದಲ್ಲಿ ಭಾರತದ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕನು 1829 ರ ಡಿಸೆಂಬರ್ 04 ರಂದು ನಿಯಮಾವಳಿ 17 ರ ಪ್ರಕಾರ ಸತಿಸಹಗಮನ ಪದ್ಧತಿಯನ್ನು ಕಾನೂನುಬಾಹಿರವೆಂದು ಘೋಷಿಸಿ, ಅದಕ್ಕೆ ಪ್ರೋತ್ಸಾಹಿಸುವವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದೆಂದು ಘೋಷಿಸಿದನು.

2) **ವಿಧವಾ ಪುನರ್ ವಿವಾಹ :-**

ರಾಜಾರಾಮಮೋಹನ ರಾಯರು ವಿಧವೆಯರನ್ನು ಮರು ಮದುವೆಯಾಗುವಂತೆ ಪ್ರೋತ್ಸಾಹಿಸಿ ಮಹಿಳೆಗೆ ಪುರುಷನ ಸ್ಥಾನಮಾನ ನೀಡಬೇಕೆಂದು ಹೋರಾಟ ನಡೆಸಿದರು.

3) **ಪಾಶ್ಚಿಮಾತ್ಯ ಶಿಕ್ಷಣಕ್ಕೆ ಪ್ರೋತ್ಸಾಹ :-**

ಶಿಕ್ಷಣಕ್ಕೆ ಮಹತ್ವ ನೀಡಿದ್ದ ರಾಜಾರಾಂ ಮೋಹನ ರಾಯರು ಇಂಗ್ಲೀಷ್ ಶಿಕ್ಷಣಕ್ಕೆ ಮಹತ್ವ ನೀಡಿ ಅದನ್ನು ಭಾರತೀಯರಿಗೆ ಪರಿಚಯಿಸುವಂತೆ ಬ್ರಿಟಿಷ್ ಸರ್ಕಾರಕ್ಕೆ ಕೇಳಿಕೊಂಡರು. ಹಾಗೆಯೇ ಭಾರತೀಯರನ್ನು ಉನ್ನತ ಹುದ್ದೆಗಳಿಗೆ ನೇಮಿಸಬೇಕೆಂದು ಒತ್ತಾಯಿಸಿದರು.

ಭಾರತೀಯ ಸಾಂಸ್ಕೃತಿಕ ಅಧ್ಯಾತ್ಮವನ್ನು ಪ್ರತಿಪಾದಿಸಿದ ರಾಜಾರಾಂ ಭಾರತಕ್ಕೆ ಪಾಶ್ಚಿಮಾತ್ಯ ಮಾದರಿ ವಿಜ್ಞಾನವನ್ನು ಪರಿಚಯಿಸಲು ಇಚ್ಛಿಸಿದ್ದರು.

Scanned with CamScanner

## ರಾಜಾರಾಮಮೋಹನರಾಯರ ನಿಧನ :-

ಈ ಆಂದೋಲನದ ಕೇಂದ್ರ ಬಿಂದುವಾದ ರಾಜಾರಾಂ ತಮ್ಮ ಬ್ರಹ್ಮ ಸಮಾಜದ ತತ್ವಗಳನ್ನು ಭಾರತೀಯ ಸಮಾಜದಲ್ಲಿ ಹರಡಿ ಆಧುನಿಕ ಭಾರತದ ಪಿತಾಮಹನೆಂಬ ಬಿರುದಿಗೆ ಪಾತ್ರರಾದರು. ಬ್ರಿಟಿಷ್ ಸರ್ಕಾರ ಮೊಘಲ್ ಚಕ್ರವರ್ತಿಗಳಿಗೆ ಕೊಡುತ್ತಿದ್ದ ಧನಸಹಾಯದ ಬಗ್ಗೆ ಚರ್ಚಿಸಲು ಇಂಗ್ಲೆಂಡಿಗೆ ತೆರಳಿದ ರಾಜಾರಾಮ ಮೋಹನರಾಯರು Sept. 27. 1833ರಲ್ಲಿ ಕಾಲವಾದರು.

## ಉಪಸಂಹಾರ :-

ಇವರ ತರುವಾಯ ಅವರು ಸ್ಥಾಪಿಸಿದ ಸಂಸ್ಥೆಯಲ್ಲಿ ಬಿರುಕು ಕಂಡುಬಂದಿತು. 1839ರಲ್ಲಿ 'ತತ್ವಬೋಧಿನಿ ಸಭಾ" ಎಂಬ ಸಾಂಸ್ಕೃತಿಕ ಸಂಸ್ಥೆಯನ್ನು ಸ್ಥಾಪಿಸುವುದರ ಮೂಲಕ ಕ್ರಿಯಾಶೀಲವಾಯಿತೆಂದು ಗುರುತಿಸಲ್ಪಟ್ಟ ರಾಯರ ಸಮಾಜಕ್ಕೆ ದೇವೇಂದ್ರನಾಥ ಠಾಗೋರ ನವಚೇತನವನ್ನು ನೀಡಿದರು.

Scanned with CamScanner